# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 20 RNI Number : KNKAN/25/A2770 22-01-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :20 ರಾಯಚೂರು 22-01-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563


## ಜೆಡಿಎಸ್ - ಬಿಜೆಪಿ ಶಾಸಕರಿಗೆ ನಯಾಪೈಸೆ ಬಿಡುಗಡೆ ಮಾಡದ ಸರ್ಕಾರ: ಹೈಕೋರ್ಟ್‌ನಲ್ಲಿ ವಕೀಲರ ವಾದ

ಬೆಂಗಳೂರು,ಜ.21-

ವಿರೋಧ ಪಕ್ಷದ ಶಾಸಕರು ಮತ್ತು ಆಡಳಿತ ಪಕ್ಷದ ಶಾಸಕರ ನಡುವೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಜೆಡಿಎಸ್ ಹಾಗೂ ಬಿಜೆಪಿಯಿಂದ ಗೆದ್ದ ಶಾಸಕರಿಗೆ ಎರಡೂವರೆ ವರ್ಷಗಳಲ್ಲಿ ಈವರೆಗೆ ಒಂದು ನಯಾ ಪೈಸೆ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಕೋಲಾರ ಶ್ರೀನಿವಾಸಪುರ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಕೆ. ವೆಂಕಟಶಿವಾ ರೆಡ್ಡಿ ಪರ ವಕೀಲರು ಹೈಕೋರ್ಟ್‌ನ ನ್ಯಾಯಪೀಠಕ್ಕೆ ತಿಳಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಶಾಸಕರ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಿಡುಗಡೆಗೊಳಿಸುವ ವಿಚಾರದಲ್ಲಿ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಆಕ್ಷೇಪಿಸಿ ಶ್ರೀನಿವಾಸಪುರ ಶಾಸಕ ಜಿ.ಕೆ. ವೆಂಕಟಶಿವಾ ರೆಡ್ಡಿ ಹಾಗೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಾರಿಗೆ ತರಲಾಗಿರುವ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿ ಜಮಖಂಡಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಜಗದೀಶ್ ಗುಡಗುಂಟಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು



ಬಖ್ರು ಹಾಗೂ ನ್ಯಾಯಮೂರ್ತಿ ಸಿ.ಎಂ ಪೂಣಚ್ಚ ಅವರಿದ್ದ ವಿಭಾಗೀಯ ನ್ಯಾಯಪೀಠಕ್ಕೆ ವಕೀಲರು ವಿವರಿಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅನುದಾನ ಹಂಚಿಕೆ ಮತ್ತು ಬಿಡುಗಡೆಯಲ್ಲಿ ರಾಜ್ಯ ಸರ್ಕಾರವು ಶಾಸಕರ ನಡುವೆ ಭಾರಿ ತಾರತಮ್ಯ ಮಾಡುತ್ತಿದೆ. ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಶಾಸಕರಿಗೆ ಯಥೇಚ್ಛವಾಗಿ ಅನುದಾನ ನೀಡಲಾಗುತ್ತಿದೆ. ಆದರೆ, ಬಿಜೆಪಿ ಮತ್ತು ಜೆಡಿಎಸ್ ಶಾಸಕರಿಗೆ ಕಳೆದ ಎರಡೂವರೆ ವರ್ಷಗಳಲ್ಲಿ ಒಂದು ನಯಾ ಪೈಸೆ ಅನುದಾನ ಕೊಟ್ಟಿಲ್ಲ. ಮುಂದಿನ ಚುನಾವಣೆಯಲ್ಲಿ ಪ್ರತಿಪಕ್ಷಗಳ ಶಾಸಕರಿಗೆ ಅನಾನುಕೂಲ ಉಂಟು ಮಾಡಲು ಈ ರೀತಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಅದಕ್ಕೆ ಅರ್ಜಿಗಳಲ್ಲಿ ಪ್ರಸ್ತಾಪಿಸಲಾಗಿರುವ ವಿಷಯದ ಬಗ್ಗೆ ಉತ್ತರಿಸಲು ಕಾಲಾವಕಾಶ ಬೇಕು ಎಂದು ಸರ್ಕಾರದ ಪರ ವಕೀಲರು ಮನವಿ ಮಾಡಿದರು. ನಿಮಗೆ (ಸರ್ಕಾರಕ್ಕೆ) ಇನ್ನೆಷ್ಟು ಸಮಯ ಬೇಕು ಎಂದು ಪ್ರಶ್ನಿಸಿದ ನ್ಯಾಯಪೀಠ, ಅಂತಿಮವಾಗಿ ಶಾಸಕರಿಗೆ ಅನುದಾನ ಬಿಡುಗಡೆ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ಉತ್ತರ ನೀಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿ ವಿಚಾರಣೆಯನ್ನು ಫೆಬ್ರವರಿ 17ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಪ್ರಸ್ತಾಪಿಸಲಾದ ಅಂಶಗಳು: ಶ್ರೀನಿವಾಸಪುರ ಪುರಸಭೆ ವ್ಯಾಪ್ತಿಯ ಗ್ರಾಮಗಳಿಗೆ 2019ರ ಜ. 23ರಂದು 5 ಕೋಟಿ ರೂ. ಹಾಗೂ ಪುರಸಭೆಗೆ ಹೊಸದಾಗಿ ಸೇರ್ಪಡೆಗೊಂಡ ವಾರ್ಡ್‌ಗಳ ಅಭಿವೃದ್ಧಿಗೆ ಜು.20ರಂದು 10 ಕೋಟಿ ರೂ. ಮಂಜೂರು ಮಾಡಲಾಗಿತ್ತು. ಆದರೆ, ಈವರೆಗೂ ಹಣ ಬಿಡುಗಡೆ ಮಾಡಿಲ್ಲ. 2023-24ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ನಿಧಿಯಿಂದ ಎಲ್ಲ ಕಾಂಗ್ರೆಸ್ ಶಾಸಕರು ಮತ್ತು ಸ್ವತಂತ್ರ ಶಾಸಕರ ಕ್ಷೇತ್ರಕ್ಕೆ ತಲಾ 25 ಕೋಟಿ ರೂ. ಬಿಡುಗಡೆ ಮಾಡಲು ಸರ್ಕಾರ ಆದೇಶಿಸಿದೆ. ಆದರೆ, ಬಿಜೆಪಿ ಹಾಗೂ ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ಅನುದಾನ ನೀಡುತ್ತಿಲ್ಲ. ಇದರಿಂದ ಶ್ರೀನಿವಾಸಪುರ ಪುರಸಭೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿದೆ.

ಅಲ್ಲದೇ, ಮುಖ್ಯಮಂತ್ರಿಗಳಿಗೆ 2024ರ ಫೆ.5ರಂದು ಮನವಿ ಪತ್ರ ನೀಡಿ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 35 ಕೋಟಿ ರೂ. ಬಿಡುಗಡೆ ಮಾಡಲು ಕೋರಿದ್ದೆ. ಮಳೆಹಾನಿ ಪ್ರದೇಶಗಳ ಪರಿಹಾರ ಕಾಮಗಾರಿಗೆ 10 ಕೋಟಿ ರೂ. ಬಿಡುಗಡೆ ಅನುಮೋದಿಸಲು 2025ರ ಫೆ.17ರಂದು ನೀಡಿದ ಮನವಿ ಪತ್ರದಲ್ಲಿ ಕೋರಿದ್ದೆ. ಅದರಂತೆ ಕ್ಷೇತ್ರದಲ್ಲಿ ನೆರೆ ಪರಿಹಾರ ಕಾರ್ಯಗಳಿಗೆ 10 ಕೋಟಿ ರೂ. ಮಂಜೂರಾತಿಗೆ ಏ.3ರಂದು ಸರ್ಕಾರ ಅನುಮೋದನೆ ನೀಡಿತ್ತು ಎಂದು ಅರ್ಜಿಯಲ್ಲಿ ವಿವರಿಸಲಾಗಿತ್ತು.

ಮುಖ್ಯಮಂತ್ರಿಗಳು ಕೋಲಾರ ಜಿಲ್ಲಾಧಿಕಾರಿಗೆ ಪತ್ರ ಬರೆದು ಕಾಂಗ್ರೆಸ್ ಶಾಸಕರಿರುವ ಬಂಗಾರಪೇಟೆ, ಕೆಜಿಎಫ್, ಕೋಲಾರ ಮತ್ತು ಮಾಲೂರು ವಿಧಾನಸಭಾ ಕ್ಷೇತ್ರಗಳಿಗೆ ತಲಾ 50 ಕೋಟಿ ರೂ. ಅನುದಾನ ಮಂಜೂರು ಮಾಡುವಂತೆ ಸೂಚಿಸಿದ್ದಾರೆ. ಕಳೆದ ಸೆ.15ರಂದು ತಮಗೆ ಮುಖ್ಯಮಂತ್ರಿಗಳು ಪತ್ರ ಬರೆದು 25 ಕೋಟಿ ರೂ. ಮಂಜೂರು ಮಾಡಿರುವುದಾಗಿ ತಿಳಿಸಿದ್ದರು. ಆದರೆ, ಈವರೆಗೆ ಹಣ ಬಿಡುಗಡೆ ಮಾಡಿಲ್ಲ. ಅನುದಾನ ಮಂಜೂರು ಹಾಗೂ ಬಿಡುಗಡೆ ವಿಚಾರದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಶಾಸಕರ ಕ್ಷೇತ್ರಗಳ ನಡುವೆ ಸರ್ಕಾರ ತಾರತಮ್ಯ ನೀಡಿ ಅನುಸರಿಸುತ್ತಿದೆ. ಆದ್ದರಿಂದ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನವನ್ನು ಒಂದು ತಿಂಗಳಲ್ಲಿ ಬಿಡುಗಡೆಗೊಳಿಸಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಅರ್ಜಿದಾರ ಶಾಸಕರು ಕೋರಿದ್ದರು.

### ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪತ್ರಕರ್ತರ ಸಭೆ

## ಪತ್ರಕರ್ತರ ಒತ್ತಾಸೆಯಿಂದಲೇ ರಾಯಚೂರು ಉತ್ಸವ-2026 ಸಾಧ್ಯ

ರಾಯಚೂರು,ಜ.21-

ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಉತ್ಸವ-2026' ಆಯೋಜನೆ ಸಾಧ್ಯವಾಗಲು ಜಿಲ್ಲೆಯ ಎಲ್ಲಾ ಮಾಧ್ಯಮ ಪ್ರತಿನಿಧಿಗಳು ನಿರಂತರವಾಗಿ ವ್ಯಕ್ತಪಡಿಸಿದ ಒತ್ತಾಸೆಯೂ ಪ್ರಮುಖ ಕಾರಣವಾಗಿದೆ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಇಚ್ಛಾಶಕ್ತಿ ಹಾಗೂ ಪತ್ರಕರ್ತರ ಸಕ್ರಿಯ ಪ್ರಯತ್ನದಿಂದಾಗಿ ಪ್ರಸಕ್ತ ವರ್ಷ ಉತ್ಸವಕ್ಕೆ ವಿವಿಧ ಮೂಲಗಳಿಂದ ಹಣಕಾಸಿನ ಸಹಕಾರ



ಲಭಿಸುತ್ತಿದೆ. ಇದರಿಂದ ಉತ್ಸವವನ್ನು ಯಶಸ್ವಿಯಾಗಿ ನಡೆಸುವ ಸದಾಶಯ ಎಲ್ಲ ವಲಯಗಳಿಂದ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಕಡಿಮೆ ಬಜೆಟ್ಟಿನಲ್ಲಿಯೇ ವಿಭಿನ್ನ ಹಾಗೂ ಜನಾಕರ್ಷಕ ಕಾರ್ಯಕ್ರಮಗಳನ್ನು ಒಳಗೊಂಡಂತೆ ಉತ್ಸವವನ್ನು ಆಯೋಜಿಸಲಾಗುತ್ತಿದೆ. ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ ಜಿಲ್ಲೆಯ ಗಣ್ಯರು, ನಾಗರಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿ ಗಳಿಂದ ಬಂದ ಸಲಹೆಗಳನ್ನು ಪರಿಗಣಿಸಿ ಉತ್ಸವದ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಹೇಳಿದರು.

ಪತ್ರಕರ್ತರ ಕೋರಿಕೆಯಂತೆ ಉತ್ಸವದ ಅವಧಿಯಲ್ಲಿ ಪತ್ರಕರ್ತರಿಗಾಗಿಯೇ ಪ್ರತ್ಯೇಕ ಮಾಧ್ಯಮ ಗೋಷ್ಠಿಯನ್ನು ನಡೆಸಲಾಗುವುದು. ಹೊರ ಜಿಲ್ಲೆಗಳಿಂದ ಆಗಮಿಸುವ

3ನೇ ಪುಟಕ್ಕೆ

### ಜಿರಾಮ್ ಜಿ ಕಾಯ್ದೆ ರದ್ದುಪಡಿಸಲು ಆಗ್ರಹಿಸಿ ಸತ್ಯಾಗ್ರಹ

## ಮನರೇಗಾ ದುರ್ಬಲಗೊಳಿಸುವ ಬಿಜೆಪಿ ನೀತಿಗೆ ಕಾಂಗ್ರೆಸ್ ಆಕ್ರೋಶ

ರಾಯಚೂರು,ಜ.21-

ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ)ಯನ್ನು ದುರ್ಬಲಗೊಳಿಸಿ, ಅದರ ಬದಲಿಗೆ ಹೊಸದಾಗಿ ರೂಪಿಸಿರುವ ವಿಬಿಜಿ ರಾಮ್ ಜಿ ಕಾಯ್ದೆಯನ್ನು ತಕ್ಷಣವೇ ರದ್ದುಪಡಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಬುಧವಾರ ನಗರದಲ್ಲಿ ಸತ್ಯಾಗ್ರಹ ನಡೆಸಲಾಯಿತು.

ನಗರದ ಮಹಾತ್ಮ ಗಾಂಧೀಜಿ ಪ್ರತಿಮೆ ಮುಂಭಾಗದಲ್ಲಿ ನಡೆದ ಸತ್ಯಾಗ್ರಹಕ್ಕೆ ವಿಧಾನಪರಿಷತ್ ಸದಸ್ಯರಾದ ಜಿ. ವಸಂತಕುಮಾರ್, ಸಂಸದರಾದ ಜಿ. ಕುಮಾರ ನಾಯಕ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಬಸವರಾಜ ಪಾಟೀಲ್ ಇಟಗಿ



ನೇತೃತ್ವ ವಹಿಸಿದ್ದರು. ಈ ವೇಳೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ಜಿ. ಕುಮಾರ ನಾಯಕ್ ಮಾತನಾಡಿ, ''ಗ್ರಾಮೀಣ ಭಾಗದ ಬಡ ಜನರಿಗೆ ಕನಿಷ್ಠ ಉದ್ಯೋಗ ಭದ್ರತೆ ಒದಗಿಸುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಮನರೇಗಾ ಯೋಜನೆಯನ್ನು ಜಾರಿಗೊಳಿಸಿತ್ತು. ಆದರೆ, ಬಿಜೆಪಿ ಸರ್ಕಾರ ಹೊಸ ಕಾಯ್ದೆ ಮೂಲಕ ಗ್ರಾಮ ಪಂಚಾಯಿತಿ ಮಟ್ಟದಲ್ಲಿದ್ದ ಉದ್ಯೋಗದ ಹಕ್ಕನ್ನು ಕಸಿದುಕೊಂಡಿದೆ. ಇದು ಜನವಿರೋಧಿ ಮತ್ತು ಬಡವರ ಬದುಕಿಗೆ ಮಾರಕವಾದ ಕ್ರಮ. ಈ ಕಾರಣದಿಂದಲೇ ಕಾಯ್ದೆ ರದ್ದುಗೊಳಿಸುವಂತೆ ಆಗ್ರಹಿಸಿ ಸತ್ಯಾಗ್ರಹ ನಡೆಸಲಾಗುತ್ತಿದೆ'' ಎಂದರು.

3ನೇ ಪುಟಕ್ಕೆ



## ಸಾಮಾಜಿಕ ಪರಿವರ್ತನೆಗಾಗಿ ಹಗಲಿರುಳು ಶ್ರಮಿಸಿದ ನಿಜಶರಣ ಅಂಬಿಗರ ಚೌಡಯ್ಯ - ಬಿ. ಜಯರಾಜ ಕಲ್ಮಾಲ

ರಾಯಚೂರು,ಜ.21-

ಶರಣ ಚಳವಳಿಯಲ್ಲಿ ಪಾಲ್ಗೊಂಡು, ಸಾಮಾಜಿಕ ಪರಿವರ್ತನೆಗಾಗಿ ಬಸವಣ್ಣನವರ ಹೆಗಲಿಗೆ ಹೆಗಲಾಗಿ ನಿಂತವರಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರು ಪ್ರಮುಖರು. ಪಾತ್ರವಹಿಸಿದ್ದಾರೆ ಎಂದು ರಾಯಚೂರು ಕುರುಬರ ಸಂಘದ ನಿರ್ದೇಶಕರಾದ ಬೇವಿನ್ ಜಯರಾಜ್ ಕಲ್ಮಾಲ ಅವರು ಹೇಳಿದರು

ಅವರು ತಮ್ಮ ಕಲ್ಮಲಾ ಗ್ರಾಮದ ಅಂಬಿಗರ ಚೌಡಯ್ಯನವರ ನಾಮಫಲಕಕ್ಕೆ ಶ್ರೀ ವೇದಮೂರ್ತಿ ಮಲ್ಲಯ್ಯ ತಾತನವರು ಹಾಗೂ ಗ್ರಾಮದ ಸಮಾಜ ಬಾಂಧವರು ಮತ್ತು ವಿವಿಧ ಪಕ್ಷದವರ ಜೊತೆ ಸೇರಿ ನಿಜಶರಣ ಅಂಬಿಗರ ಚೌಡಯ್ಯ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ಅತ್ಯಂತ ಸಂಭ್ರಮದಿಂದ ಕಾರ್ಯಕ್ರಮ ನೆರವೇರಿಸಿದರು

ನಂತರ ಮಾತನಾಡಿದ ಅವರು ತಮ್ಮ ನೇರ, ನಿಷ್ಠುರ, ತೀಕ್ಷ್ಣ ಬರಹಗಳ ಮೂಲಕ ವರ್ಣವ್ಯವಸ್ಥೆ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ

3ನೇ ಪುಟಕ್ಕೆ

## ಅಂಬಿಗರ ಚೌಡಯ್ಯನವರ ಜೀವನ ಮೌಲ್ಯಗಳನ್ನು ಅರಿಯೋಣ: ಸಚಿವ ಬೋಸರಾಜು ಸಲಹೆ

ರಾಯಚೂರು ಜ.21

ಸಮಾಜದಲ್ಲಿನ ಅನಾಚಾರ, ಅಪನಂಬಿಕೆಗಳನ್ನು ನಿರ್ಭೀತಿಯಿಂದ ಟೀಕಿಸಿ ಕ್ರಾಂತಿಕಾರಿ ಶರಣರು ಎಂದು ಹೆಸರಾದ ನಿಜಶರಣ ಅಂಬಿಗರ ಚೌಡಯ್ಯನವರ ಆಚಾರ-ವಿಚಾರಗಳನ್ನು ನಾವೆಲ್ಲರು ಅರಿತು ನಡೆಯಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.

ಜನವರಿ 21ರ ಬುಧವಾರ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯ ಅವರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂಬಿಗರ ಚೌಡಯ್ಯನವರು ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಎತ್ತಿ ಹಿಡಿದರು. ಬಸವಣ್ಣನವರ ಅನುಯಾಯಿಗಳಾದ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಜೀವನದ ಸಾರವೇ ಅಡಗಿದೆ ಎಂದು ತಿಳಿಸಿದರು.




ಈ ವೇಳೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಮಾತನಾಡಿ, ಅಂಬಿಗರ ಚೌಡಯ್ಯನವರು ವಚನಗಳ ಮೂಲಕ ಸಮಸಮಾಜ ಕಟ್ಟುವ ಕೆಲಸ ಮಾಡಿದರು ಎಂದು ತಿಳಿಸಿದರು. ಬಹುಸಂಖ್ಯಾತರಾದ ಗಂಗಾಮಸ್ಥರಿಗೆ ಸಮಾಜದಲ್ಲಿ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯ ಸಿಗಬೇಕು. ಈ ನಿಟ್ಟಿನಲ್ಲಿ ಸಮಾಜದ ಕೆಲಸ ಕಾರ್ಯಗಳನ್ನು ಪಕ್ಷಾತೀತವಾಗಿ ಮಾಡಲಾಗುತ್ತದೆ. ಸಮಾಜದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ದೊಡ್ಡದೊಡ್ಡ ಹುದ್ದೆಗಳನ್ನು ಅಲಂಕರಿಸಬೇಕು ಎಂದರು.

ಗಂಗಾಮತಸ್ಥ ಸಮಾಜದ ಜಿಲ್ಲಾಧ್ಯಕ್ಷರಾದ ಕೆ.ಶಾಂತಪ್ಪ ಅವರು ವಿಶೇಷ ಉಪನ್ಯಾಸ ನೀಡಿ, ಚೌಡಯ್ಯನವರು ಯಾವುದೇ ಜಾತಿಗೆ ಸೀಮಿತವಲ್ಲ. ಅವರು ಮೂರ್ತಿ ಪೂಜೆಗೆ ಅವಕಾಶ ಕೊಡಲಿಲ್ಲ. ಅಂತಹ ನೇರ ನಿಷ್ಠುರ ಅಂಬಿಗರ ಚೌಡಯ್ಯನವರ ತಿಳಿಸಿದ ಸನ್ಮಾರ್ಗದಲ್ಲಿ ನಾವು ನಡೆಯಬೇಕು. ಚೌಡಯ್ಯನವರು ಬಸವನ ತತ್ವವನ್ನು ಒಪ್ಪಿ ಅನುಭವ ಮಂಟಪಕ್ಕೆ ಹೋದರು. ಮೂಢನಂಬಿಕೆಯಲ್ಲಿ ನಾವು ಮುಳುಗಿ ಹೋಗಿದ್ದೇವೆ. ಅಂತಹ ಮೂಢನಂಬಿಕೆಗಳಿದ ನಾವು ಹೊರ ಬರಬೇಕು. ನಮಗೆ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಇದ್ದು, ಆ ಗುರುಗಳ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯಬೇಕು. ನಮ್ಮ ಆಚಾರ ವಿಚಾರ, ಸಂಸ್ಕೃತಿಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು. ವಿದ್ಯಾರ್ಥಿಗಳಲ್ಲಿ ಸಂಸ್ಕಾರವನ್ನು ಕಲಿಸಬೇಕು. ಸಮಾಜದ ಬಗ್ಗೆ ತಿಳಿಹೇಳಬೇಕು ಎಂದರು.

ಸಮಾಜದ ವಿವಿಧ ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರಿಗೆ ಗಣ್ಯರಿಂದ ಸನ್ಮಾನಿಸಿ ಗೌರವಿಸಲಾಯಿತು.

3ನೇ ಪುಟಕ್ಕೆ



## ವಿಜೇತ ಕ್ರೆಡಿಟ್ ಸೌಹಾರ್ದ ಸಹಕಾರಿಯ 6 ನೇ ವಾರ್ಷಿಕೋತ್ಸವ 28 ಕೋಟಿ ದುಡಿಯುವ ಬಂಡವಾಳ ಹೊಂದಿದೆ - ಅಮರಗುಂಡಯ್ಯ

ಸಿರವಾರಜ.21-

ಪಟ್ಟಣದ ವಿಜೇತ ಕ್ರೆಡಿಟ್ ಸೌಹಾರ್ದ ಸಹಕಾರಿಯ 6 ನೇ ವಾರ್ಷಿಕೋತ್ಸವದ ನಿಮಿತ್ಯ ಮಹಾಲಕ್ಷ್ಮಿ ಪೂಜೆ ಹಾಗೂ ಸತ್ಯನಾರಾಯಣ ಪೂಜೆಯನ್ನು ನೀಲೋಗಲ್ ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ನವಲಕಲ್ ಬೃಹನ್ಮಠದ ಅಭಿನವ ಸೋಮನಾಥ ಶಿವಾಚಾರ್ಯ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ

3ನೇ ಪುಟಕ್ಕೆ

## ದೇವಿನಗರದಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಆಚರಣೆ



ರಾಯಚೂರು,ಜ.21-

ಬ್ಲೂ ಆರ್ಮಿ ದೇವಿನಗರ ಇವರ ವತಿಯಿಂದ ನಗರದ ದೇವಿನಗರ ಬಡಾವಣೆಯಲ್ಲಿ ಶ್ರೀ ಶ್ರೀ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 906 ನೇ ಜಯಂತಿಯ ಕಾರ್ಯಕ್ರಮವನ್ನು ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಮೇಣದ ಬತ್ತಿಯನ್ನು ಹಚ್ಚುವ ಮೂಲಕ ಜಯಂತೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು ಈ ಕಾರ್ಯಕ್ರಮವನ್ನು ಬಡಾವಣೆಯ ಹಿರಿಯರು ಆಗಿರುವ ಆಯುಷ್ಮತಿ ಲಕ್ಷ್ಮಿ ಅವರು ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳು.

ಇನ್ನೂ ಹೆಚ್ಚಿನ ರೀತಿಯಲ್ಲಿ ನಮ್ಮ ಬಡಾವಣೆಯಲ್ಲಿ ಆಚರಿಸಬೇಕು ಎಂದು ಮಾತನಾಡಿದರು, ಅದೇ ರೀತಿ ಬಡಾವಣೆಯ ಯುವ ಮುಖಂಡರಾದ ಆಯುಷ್ಮಾನ್ ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ 12ನೇ ಶತಮಾನದ ಮಹಾನ್ ವಚನಕಾರರು, ಶರಣ ಚಳುವಳಿಯ ಕ್ರಾಂತಿಕಾರಿ ಸಂತ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಭಕ್ತಿಪೂರ್ವಕವಾಗಿ ಆಚರಿಸಲು ನಾವು ಈ ಕಾರ್ಯಕ್ರಮದಲ್ಲಿ ಸೇರಿದ್ದೇವೆ, ಅಂಬಿಗರ ಚೌಡಯ್ಯನವರು ಸಮಾಜದ ಕೆಳಸ್ತರದಲ್ಲಿ ಹುಟ್ಟಿದರೂ, ಅವರ ಚಿಂತನೆಗಳು ಅತ್ಯಂತ ಎತ್ತರದಲ್ಲಿದ್ದವು. ವೃತ್ತಿಯಿಂದ ದೋಣಿ ಸಾಗಿಸುವ ಅಂಬಿಗ ಸಮುದಾಯಕ್ಕೆ ಸೇರಿದವರು ಆದರೂ, ಅವರು ತಮ್ಮ ವಚನಗಳ ಮೂಲಕ ಜಾತಿಭೇದ, ಅಸಮಾನತೆ ಮತ್ತು ಅಂಧಾಚಾರಗಳನ್ನು ಧೈರ್ಯವಾಗಿ ಪ್ರಶ್ನಿಸಿದರು. ''ವೃತ್ತಿಯೇ ಧರ್ಮ'' ಎಂಬ ತತ್ವವನ್ನು ತಮ್ಮ ಜೀವನದಲ್ಲಿಯೇ ಅಳವಡಿಸಿಕೊಂಡ ಮಹಾನ್ ಶರಣರು ಅವರು, ಅವರ ವಚನಗಳು ಸರಳವಾಗಿದ್ದರೂ ಅರ್ಥದಲ್ಲಿ ಆಳವಾಗಿದ್ದವು. ದೇವರ ಮುಂದೆ ಎಲ್ಲರೂ ಸಮಾನರು, ಮನುಷ್ಯನಿಗೆ ಮನುಷ್ಯನೇ ಶ್ರೇಷ್ಠ ಎಂಬ ಸಂದೇಶವನ್ನು ಅವರು ಸಮಾಜಕ್ಕೆ ಸಾರಿದರು. ಶ್ರಮಕ್ಕೆ ಗೌರವ, ಮಾನವೀಯತೆಗೆ ಮೌಲ್ಯ ಎಂಬುದು ಅವರ ಬದುಕಿನ ಮಂತ್ರವಾಗಿತ್ತು.



## ನೂತನ ಸಹಾಯಕ ಆಯುಕ್ತರಿಗೆ ಉಪ್ಪಾರ ಸಮಾಜದಿಂದ ಸನ್ಮಾನ

ರಾಯಚೂರು,ನೂತನವಾಗಿ ಸಹಾಯಕ ಆಯುಕ್ತರಾಗಿ ಆಗಮಿಸಿದ ಡಾ.ಹಂಪಣ್ಣ ಸಜ್ಜನ್ ಇವರಿಗೆ ಇಂದು ಅವರ ಕಾರ್ಯಾಲಯದಲ್ಲಿ ಜಿಲ್ಲಾ ಉಪ್ಪಾರಸಮಾಜ ಸೇವಾ ಸಂಘ (ರಿ) ರಾಯಚೂರು ವತಿಯಿಂದ ಗೌರವ ಪೂರಕವಾಗಿ ಅವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷರು ಪಾಗುಂಟಪ್ಪ ಮಿರ್ಜಾಪೂರ, ಗೌರವಾಧ್ಯಕ್ಷ ದೇವೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಚಂದ್ರಶೇಖರ, ಬಿ.ಜಿ.ನಾಗರಾಜ, ಸ್ಟೇಷನ್ ಶ್ರೀನಿವಾಸ, ಆಂಜನೇಯ್ಯ ಆಯ್ಯನಪೂರು,ಗಟ್ಟು ಶ್ರೀನಿವಾಸ, ಡಿ.ರಾಮಪ್ಪ, ಶರಣಪ್ಪ ಸಾನಬಾಳ, ಶರಣಬಸವ ಕಲ್ಲೂರು, ವೀರೇಶ, ರಂಗಪ್ಪ ಇವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಯುವಕರು ವಾಸ್ತುಶಿಲ್ಪದ ಮಹತ್ವ ಅರಿಯಲಿ: ಸಿದ್ದರಾಮಯ್ಯ

ಬಾದಾಮಿ,ಜ.21-

ಬಾದಾಮಿಯ ಇಮ್ಮಡಿ ಪುಲಿಕೇಶಿ ವೇದಿಕೆಯಲ್ಲಿ ಚಾಲುಕ್ಯ ಉತ್ಸವ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬಾದಾಮಿ. ಐಹೊಳೆ, ಪಟ್ಟದಕಲ್ಲು ನೋಡಲು ದೇಶ, ವಿದೇಶಗಳಿಂದ ಜನರು ಬರುತ್ತಾರೆ. ಚಾಲುಕ್ಯರು ಎಲ್ಲ ಧರ್ಮಗಳ ಸಮನ್ವಯಕರಾಗಿದ್ದರು. ಅವರಂತೆಯೇ ಎಲ್ಲ ಧರ್ಮದವರನ್ನು ಒಗ್ಗೂಡಿಸಿಕೊಂಡು ಹೋಗುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದರು.

₹2 ಸಾವಿರ ಕೋಟಿಯನ್ನು ಬಾದಾಮಿ ಅಭಿವೃದ್ದಿಗೆ ನೀಡಲಾಗಿದೆ. ಬಾದಾಮಿ ಕ್ಷೇತ್ರದ ಅಭಿವೃದ್ಧಿಯನ್ನು ನಾನೂ ಶಾಸಕನಾಗಿದ್ದಲೂ ಮಾಡಿದ್ದೆ. ₹1,400 ಕೋಟಿ ಅನುದಾನವನ್ನು ಕೆರೂರ ಏತ ನೀರಾವರಿ ಯೋಜನೆಗೆ ನೀಡಲಾಗಿದೆ. ಬಾದಾಮಿ, ಕೆರೂರ ಸೇರಿದಂತೆ 27 ಗ್ರಾಮಗಳ ಕುಡಿಯುವ ನೀರಿಗೆ ₹420 ಕೋಟಿ, ರಸ್ತೆಗಳ ಅಭಿವೃದ್ದಿಗೆ ₹50 ಕೋಟಿ ನೀಡಲಾಗಿದೆ. ನಮ್ಮ ಸರ್ಕಾರ ನುಡಿದಂತೆ ನಡೆಯುವ ಸರ್ಕಾರವಾಗಿದೆ ಎಂದು ಹೇಳಿದರು.

ಉತ್ಸವಕ್ಕೆ ₹3 ಕೋಟಿ ಅನುದಾನ ನೀಡಿದ್ದೆ. ಸಾಲುವುದಿಲ್ಲ ಎಂದಿದ್ದರಿಂದ ಇನ್ನೂ ₹1 ಕೋಟಿ ಬಿಡುಗಡೆ ಮಾಡುವೆ. ಇಮ್ಮಡಿ ಪುಲಿಕೇಶಿ ಪ್ರತಿಮೆಗೂ ಆರ್ಥಿಕ ನೆರವು ನೀಡಲಾಗುವುದು ಎಂದರು.

ಸಂಸದ ಗದ್ದಿಗೌಡರ ಹೇಳಿರುವುದರಿಂದ ನೆರವಿಗಾಗಿ ಕೇಂದ್ರಕ್ಕೆ ಮನವಿ ನೀಡಲಾಗುವುದು. ಅನುದಾನ ಕೊಡಿಸುವುದು ನಿಮ್ಮ ಜವಾಬ್ದಾರಿ. ಹಲವಾರು ಬಾರಿ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿತ್ತು. ಅವರು ಸ್ಪಂದಿಸದ್ದರಿಂದ ಮನವಿ ನೀಡಲು ಹೋಗಿರಲಿಲ್ಲ. ಈಗ ಅವರೇ ಹೇಳಿರುವುದರಿಂದ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಚಾಮುಂಡಿ ವಿಧಾನಸಭಾ ಕ್ಷೇತ್ರದಲ್ಲಿ ಸೋಲಿಸಿದ್ದರು. ಬಾದಾಮಿಯ ಜನ ಗೆಲ್ಲಿಸಿದ್ದರು. ಅದರಿಂದಾಗಿಯೇ ಇಂದು ನಾನು ಮುಖ್ಯಮಂತ್ರಿಯಾಗಲು ಸಾಧ್ಯವಾಯಿತು. ನಿಮ್ಮ ಉಪಕಾರವನ್ನು ಎಂದಿಗೂ ಕೂಡ ಮರೆಯುವುದಿಲ್ಲ. ನೋವಿನ ಸಂಗತಿ ಎಂದರೆ ಚಾಲುಕ್ಯ ಉತ್ಸವ ನಡೆಯಲಿಲ್ಲ, ಇಮ್ಮಡಿ ಪುಲಿಕೇಶಿ ಮೂರ್ತಿ ಪ್ರತಿಷ್ಠಾಪನೆಯಾಗಲಿಲ್ಲ ಎಂಬ ಕೊರಗಿತ್ತು. ಈಗ ಅವೆರಡೂ ಈಡೇರಿವೆ ಎಂದರು.



ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲುಕ್ಯ ಉತ್ಸವ ಆಯೋಜಿಸುವ ಮೂಲಕ ಬಹಳ ದೊಡ್ಡ ಅವಕಾಶ ಒದಗಿಸಿಕೊಟ್ಟಿದ್ದಾರೆ. ದೇಶವೇ ಚರ್ಚೆ ಮಾಡುವಂತಹ ನಾಯಕತ್ವ ಹೊಂದಿದ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಎಂದರು.

ಪಲ್ಲವ, ಹರ್ಷವರ್ಧನ ರಾಜರನ್ನು ಸೋಲಿಸಿದ ಕೀರ್ತಿ ಇಮ್ಮಡಿ ಪುಲಕೇಶಿ ಅವರದ್ದಾಗಿದೆ. ಬಾದಾಮಿಗೆ ನೀರು ಒದಗಿಸುವ ಏತ ನೀರಾವರಿ ಯೋಜನೆ ಪೂರ್ಣಗೊಳಿಸಲು ನೆರವು ನೀಡಬೇಕು. ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಒತ್ತು ಸಿಗಬೇಕಿದೆ. ಜನರ ಸ್ಥಳಾಂತರಕ್ಕೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ ಎಂದರು.

ಇಮ್ಮಡಿ ಪುಲಿಕೇಶಿ ಮೂರ್ತಿ ಪ್ರತಿಷ್ಠಾಪಿಸಬೇಕು ಎಂಬುದು ಎರಡು ದಶಕಗಳ ಆಗ್ರಹವಾಗಿತ್ತು. ಹೋರಾಟಗಳೂ ನಡೆದಿದ್ದವು. ಮೂರ್ತಿ ಪ್ರತಿಷ್ಠಾಪನೆ ಕಾಮಗಾರಿಗೆ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೀಡಲಾಗಿದೆ. ಬಹುವರ್ಷಗಳ ಕನಸು ನನಸಾಗಲಿದೆ ಎಂದು ಹೇಳಿದರು.

ಸಂಸದ ಪಿ.ಸಿ. ಗದ್ದಿಗೌಡರ ಮಾತನಾಡಿ, ಇಮ್ಮಡಿ ಪುಲಿಕೇಶಿ ಮೂರ್ತಿ ತಯಾರಿಸಿ ಬಹಳ ವರ್ಷಗಳಾಗಿದ್ದರೂ ಪ್ರತಿಷ್ಠಾಪನೆಯಾಗಿಲ್ಲ. ಹೃದಯ ಯೋಜನೆ ಕುಂಟುತ್ತಾ ಸಾಗಿದೆ. ಸ್ಥಳೀಯರ ಸಹಕಾರ ನೀಡದಿರುವುದು ಸಹ ಅಭಿವೃದ್ದಿಗೆ ಹಿನ್ನಡೆಯಾಗಿದೆ ಎಂದರು.

ಸಚಿವ ಶಿವರಾಜ ತಂಗಡಗಿ ಮಾತನಾಡಿ, ಬಜೆಟ್ನಲ್ಲಿಯೇ ಚಾಲುಕ್ಯ ಉತ್ಸವಕ್ಕೆ ಅನುದಾನ ತೆಗೆದಿರಿಸಲಾಗಿತ್ತು. ಬಾಲ್ಯದಲ್ಲಿ ಉತ್ಸವ ನೋಡಲು ಬರುತ್ತಿದ್ದದ್ದೂ ಈಗಲೂ ನೆನಪಿದೆ. 11 ವರ್ಷಗಳ ನಂತರ ಉತ್ಸವ ನಡೆಯುತ್ತಿದೆ. ಬಾದಾಮಿ ಮುಖ್ಯಮಂತ್ರಿಯಾಗಲು ಮರುಜೀವ ನೀಡಿದ ಜಿಲ್ಲೆಯಾಗಿದೆ ಎಂದು ಸಿದ್ದರಾಮಯ್ಯ ಸದಾ ಸ್ಮರಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಕನ್ನಡ, ಸಂಸ್ಕೃತಿ ಬೆಳವಣಿಗೆಗೆ ಬಹಳಷ್ಟು ದೊಡ್ಡ ಕೊಡುಗೆಯನ್ನು ಸಿದ್ದರಾಮಯ್ಯ ನೀಡಿದ್ದಾರೆ. ಹಲವು ಟ್ರಸ್ಟ್, ಪ್ರಾಧಿಕಾರಗಳಿಗೆ ಏಕಕಾಲಕ್ಕೆ ನೇಮಕ ಮಾಡಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, ವಿಶ್ವವೇ ಬಾದಾಮಿಯನ್ನು ನೋಡುವಂತೆ ಮಾಡಿದವರು ಚಾಲುಕ್ಯರಾಗಿದ್ದಾರೆ. ಶಿಲ್ಪಕಲೆಯ ವೈಭವದ ನಾಡಾಗಿದೆ. ಉತ್ಸವ ಮಾಡಬೇಕು ಎನ್ನುವುದು ಸಿದ್ದರಾಮಯ್ಯ ಅವರ ಕಾಳಜಿಯೂ ಆಗಿತ್ತು ಎಂದು ಸ್ಮರಿಸಿಕೊಂಡರು.

ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿದರು. ಗ್ಯಾರಂಟಿಗಳ ಮೂಲಕ ಸ್ವಾಭಿಮಾನ ಬದುಕು ಕಟ್ಟಿಕೊಟ್ಟಿದ್ದಾರೆ. ಸರ್ಕಾರಿ ವೈದ್ಯಕೀಯ ಕಾಲೇಜು ಸಚಿವ ಭೈರತಿ ಸುರೇಶ, ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ಶಾಸಕರಾದ ಭೀಮಸೇನ ಚಿಮ್ಮನಕಟ್ಟಿ, ಜೆ.ಟಿ. ಪಾಟೀಲ, ವಿಜಯಾನಂದ ಕಾಶಪ್ಪನವರ, ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್. ಪೂಜಾರ, ಹಣಮಂತ ನಿರಾಣಿ, ಉಮಾಶ್ರೀ, ಎಸ್.ಜಿ. ನಂಜಯ್ಯನಮಠ ಇದ್ದರು.

ಬಾದಾಮಿಯಲ್ಲಿ ಸೋಮವಾರ ಆರಂಭವಾದ ಚಾಲುಕ್ಯ ಉತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಜಾವಾಣಿ' ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಸಚಿವ ಶಿವರಾಜ ತಂಗಡಗಿ ಸಚಿವ ಆರ್.ಬಿ. ತಿಮ್ಮಾಪುರ ಸಚಿವ ಭೈರತಿ ಸುರೇಶ ಪಾಲ್ಗೊಂಡಿದ್ದರು.

# ತೊಗರಿಗೆ ಮೌಲ್ಯವರ್ಧಿತ ಬೆಲೆಗೆ ಯೋಜನೆ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ,ಜ.21-

ಜಿಲ್ಲೆಯಲ್ಲಿ ಬೆಳೆಯುವ ಉತ್ಕೃಷ್ಠ ತೊಗರಿಯನ್ನು ಬಳಸಿಕೊಂಡು ಮೌಲ್ಯವರ್ಧನೆಯ ಉತ್ಪನ್ನಗಳನ್ನು ತಯಾರಿಸುವ ಮೂಲಕ ಮಾರುಕಟ್ಟೆ ಸೃಷ್ಟಿಸಿ, ರೈತರಿಗೆ ಹೆಚ್ಚಿನ ಬೆಲೆ ಒದಗಿಸಿಕೊಡಲು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಾಗುವುದು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ತೊಗರಿ ಮೌಲ್ಯವರ್ಧನೆಗೆ ಬೇಕಾದ ಸಂಶೋಧನೆ, ತಾಂತ್ರಿಕ ನೆರವಿನ ವ್ಯವಸ್ಥೆ ಸೇರಿದಂತೆ ಅಗತ್ಯವಿರುವ ಉಪಕ್ರಮಗಳನ್ನು ಕೈಗೊಳ್ಳಲು ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಗಮದ ಅಧ್ಯಕ್ಷರಾದ ಸೈಯದ್ ಮಹಮೂದ್ ಚಿಸ್ತಿ (ಸಾಹೇಬ್) ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಸಚಿವರು, ಯಾವುದೇ ಕೃಷಿ ಉತ್ಪನ್ನಗಳನ್ನು ಸ್ಥಳೀಯವಾಗಿ ಮೌಲ್ಯವರ್ಧನೆ ಮಾಡಿ ಮಾರುಕಟ್ಟೆ ಸೃಷ್ಟಿಸಿದಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬಹುದು



ಮತ್ತು ಗ್ರಾಮೀಣ ಉದ್ಯಮ ಶೀಲತೆಯನ್ನು ವೃದ್ದಿಸಬಹುದು ಎಂದು ಹೇಳಿದರು.

ಈ ಕಾರ್ಯಕ್ರಮದಡಿ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಧಾರಣೆಯನ್ನೂ ಒದಗಿಸಬಹುದು ಹಾಗೂ ಈ ನಿಟ್ಟಿನಲ್ಲಿ ಸ್ಥಳೀಯ ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ತೊಗರಿ ಕಣಜ ಎಂದೇ ಹೆಸರುವಾಸಿಯಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಬೆಳೆಯುವ ತೊಗರಿಯು ವಿಶಿಷ್ಠ ರುಚಿ, ವಿಭಿನ್ನ ಪರಿಮಳ ಮತ್ತು ದೀರ್ಘಕಾಲ ಬಾಳಿಕೆ ಬರುವ ಉತ್ತಮ ಗುಣಮಟ್ಟದ ಕಾರಣದಿಂದಾಗಿ ಎಐ ಟ್ಯಾಗ್ ಪಡೆದು ಜಾಗತಿಕವಾಗಿ ತನ್ನದೇ ಆದ ಸ್ಥಾನ ಮತ್ತು ಹೆಗ್ಗುರುತನ್ನು ಪಡೆದಿದೆ ಎಂದು ತಿಳಿಸಿದರು.




# ಕುಸಿದಿರುವ ಪ್ರಶಸ್ತಿಗಳ ಮೌಲ್ಯ: ವಿಷಾದ

ಬಾಗಲಕೋಟೆ,ಜ.21-

ಶನಿವಾರ ಪಟ್ಟಣದ ಬಸವ ಮಂಟಪದಲ್ಲಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ನಡೆದ 38ನೇ ಮನೆ ಮನಗಳಿಗೆ ವಚನ ಸೌರಭ, ಚೆನ್ನಮ್ಮ ಹಾಗೂ ನೀಲಕಂಠಪ್ಪ ಹಾದಿಮನಿ ಶರಣ ದಂಪತಿಗಳ 9ನೇ ಪುಣ್ಯಸ್ಮರಣೆ, ದತ್ತಿ ಉಪನ್ಯಾಸಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ಶಿಕ್ಷಕನ ಸೇವೆಗಳನ್ನು ಗುರುತಿಸುವ ವ್ಯಕ್ತಿಗಳಿದ್ದರು. ಆದರೆ ಇಂದು ಶಿಕ್ಷಕರ ಸೇವೆಗಳನ್ನು ಗುರುತಿಸುವುದು ಕಡಿಮೆಯಾಗಿದೆ. ಕಾರಣ ಅಲ್ಲಿಯೂ ರಾಜಕಾರಣ ಆವರಿಸಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುದ್ದೇಬಿಹಾಳ ತಾಲ್ಲೂಕು ಪಂಚಾಯಿತಿ ಪಿ. ಎಂ.ಪೋಷಣ ಸಹ ನಿರ್ದೇಶಕ ಮಲ್ಲಿಕಾರ್ಜುನ ಬೆಳಗಲ್ ಮಾತನಾಡಿ, ನೀಲಕಂಠಪ್ಪ ಹಾದಿಮನಿ ಶರಣರು ತಮ್ಮ ವೃತ್ತಿ ಜೀವನದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತಗೆ ಕಾಯಕದ ಮಹತ್ವವನ್ನು ತಿಳಿಸಿದರು ಎಂದರು.

ಶಿರೂರು ಮಹಾಂತ ತೀರ್ಥದ ಬಸವಲಿಂಗ ಸ್ವಾಮೀಜಿ ಮಾತನಾಡಿ, ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಮುನ್ನಡೆದಾಗ ನಮ್ಮ ಬದುಕು ಸುಂದರವಾಗುತ್ತದೆ ಎಂದರು. ಲೇಖಕಿ ಲಲಿತಾ ಹೊಸಪ್ಯಾಟಿ ಮಾತನಾಡಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್ ಎನ್. ಹಾದಿಮನಿ ಪ್ರಸ್ತಾವಿಕ ನುಡಿಗಳನ್ನಾಡಿದರು.

ಸುಳೇಬಾವಿ ಸರ್ಕಾರಿ ಬಾಲಕಿಯರ ಮಾದರಿ ಪ್ರಾಥಮಿಕ ಶಾಲೆ ಶಿಕ್ಷಕಿ ಸಂಗಮ್ಮ ದಾಸಪ್ಪನವರ ಹಾಗೂ ಹೊನ್ನರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಪ್ರಭು ಮಾಲಗಿತ್ತಿಮಠ ಅವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪಟ್ಟಣದ ಗಚ್ಚಿನಮಠದ ಅಮರೇಶ್ವರ ದೇವರು, ವಿಜಯಪುರ -ಬಾಗಲಕೋಟೆ ಹಾಲು ಒಕ್ಕೂಟದ ಕೆ.ಎಂ.ಎಫ್ ನ ನಿವೃತ್ತ ವ್ಯವಸ್ಥಾಪಕ ಎಸ್.ಎನ್. ಹಾದಿಮನಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಿವಗಂಗಾ ರಂಜಣಗಿ ಇದ್ದರು.

# ಪೊಲೀಸರು ಎಂದರೆ ಭಯವಲ್ಲ, ನೊಂದವರ ಭರವಸೆ: ಡಾ.ಶರಣಪ್ಪ ಎಸ್.ಡಿ

ಕಲಬುರಗಿ,ಜ.21-

ಪೊಲೀಸರು ಎಂದರೆ ಭಯವಲ್ಲ, ಅದು ನೊಂದವರ ಭರವಸೆಯಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಅವರು ಹೇಳಿದರು.

ನಗರದ ಕನ್ನಡಭವನದಲ್ಲಿ ಜಮಾದಾರ ಕುಟುಂಬ ಪ್ರತಿಷ್ಠಾನ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಬೆಸ್ಟ್ ಪೊಲೀಸ್ ಪ್ರಶಸ್ತಿ, ಮೆಟ್ರಿಕ್ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪೊಲೀಸ್ ಕುಟುಂಬದ ಮಕ್ಕಳಿಗೆ ವಿಶೇಷ ಸನ್ಮಾನ ಸಮಾರಂಭದಲ್ಲಿ ಪ್ರಶಸ್ತಿ ವಿತರಿ ಮಾತನಾಡಿದ ಡಾ.ಶರಣಪ್ಪ ಎಸ್.ಡಿ, ಕಳೆದ ಏಳೂವರೆ ದಶಕದಲ್ಲಿ ಪೊಲೀಸ್ ಇಲಾಖೆಯು ಬಹಳಷ್ಟು ಬದಲಾವಣೆಯೊಂದಿಗೆ ಕೆಲಸ ಮಾಡುತ್ತಿದೆ. ಅದರಂತೆಯೇ ಪತ್ರಿಕೋದ್ಯಮ ಎಂದರೂ ಒಂದು ಕಾಲದಲ್ಲಿ ಭಯ ಇತ್ತು. ಇಂದು ಅದು ಕೂಡ ಅಭಿವೃದ್ಧಿಯ ವಿಷಯ, ಸಮಾಜದಲ್ಲಿ ಸಮಾನತೆ ರೂಪಿಸುವಲ್ಲಿ ಮಾಧ್ಯಮ ಕೆಲಸ ಮಾಡಿದೆ ಎಂದು ಅಭಿಪ್ರಾಯಪಟ್ಟರು.

ವಿದ್ಯೆ ಕೊಡುವ ಶಿಕ್ಷಕರನ್ನು, ಹಿರಿಯರನ್ನು ಗೌರವಿಸುವುದು ಸೇರಿದಂತೆ ಹಲವು ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತರಿಸಬೇಕಿದೆ, ಮಕ್ಕಳನ್ನು ಕೇವಲ ಕುಟುಂಬದ ಆಸ್ತಿಯನ್ನು ಮಾಡದೆ ದೇಶದ ಆಸ್ತಿಯನ್ನಾಗಿ ಮಾಡಬೇಕು, ಅಂದಾಗ ಮಾತ್ರ ಮಕ್ಕಳ ಹಾಗೂ ಕುಟುಂಬದ ಭವಿಷ್ಯ ಉಜ್ವಲವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಎಚ್.ಟಿ ಪೋತೆ, ಸಮಾಜಕ್ಕೆ ಪೂರಕವಾಗಿ ಬೆಳೆಯುವಂತಹ ಕನಸುಗಳಿರಬೇಕು. ಡಾ.ಅಂಬೇಡ್ಕರ್ ದೊಡ್ಡ ವ್ಯಕ್ತಿಗಳಾದರು. ಆದರೆ ಎಲ್ಲರೂ ಅಂಬೇಡ್ಕರ್ ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.



ಪತ್ರಕರ್ತ ಪ್ರಭುಲಿಂಗ ನೀಲೂರೆ, ಹನುಮಂತರಾವ್ ಭೈರಾಮಡಗಿ, ಗುರುರಾಜ್ ಕುಲಕರ್ಣಿ, ಅಶೋಕ್ ದೊಡ್ಡಮನಿ, ಗೀತಾ ಹೊಸಮನಿ, ಮಲ್ಲಿಕಾರ್ಜುನ್ ಬೀರನೂರ, ಭೀಮರಾವ್ ಜಾಧವ್ ಅವರಿಗೆ ಗೌರವ ಸನ್ಮಾನ ಮಾಡಲಾಯಿತು.

ಇದೇ ವೇಳೆಯಲ್ಲಿ ಮೆಟ್ರಿಕ್ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪೊಲೀಸ್ ಕುಟುಂಬದ ಮಕ್ಕಳಿಗೆ ವಿಶೇಷ ಸನ್ಮಾನ ಮಾಡಲಾಯಿತು.

ಮಹಾನಗರ ಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ಅನುಪಮಾ ರಮೇಶ್, ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ಶಿವಕುಮಾರ ಹೊನಗುಂಟಿ, ಪತ್ರಕರ್ತರಾದ ಡಾ. ಶಿವರಂಜನ್ ಸತ್ಯಂಪೇಟೆ, ಬಾಬುರಾವ್ ಯಡ್ರಾಮಿ, ಚಂದ್ರಶೇಖರ ಕವಲಗಾ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ರಮೇಶ ಜಮಾದಾರ, ಸಂಜೀವಕುಮಾರ ಕಾಂಬಳೆ, ಪಂಚಾಕ್ಷರಿ ಜಮಾದಾರ, ಶರಣಗೌಡ ಪಾಟೀಲ್, ಸುಭಾಷ್ ಆಲೂರ, ನಾಗಶೆಟ್ಟಿ ಡಾಕುಳಗಿ, ಪ್ರಕಾಶ ಉಡಚಣ, ಮಲ್ಲಣ್ಣ ಯಂಕಟಚಿ, ಸುರೇಶ್ ಲೇಂಗಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಪ್ರತಿಷ್ಠಾನದ ಅಧ್ಯಕ್ಷ ಹಾಗೂ ಪತ್ರಕರ್ತ ಸೂರ್ಯಕಾಂತ್ ಜಮಾದಾರ ಅಧ್ಯಕ್ಷತೆ ವಹಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ. ಎಂ ಪಾಟೀಲ್ ಪ್ರಾರ್ಥನೆ ಗೀತೆ ಹಾಡಿದರು. ಶಿವಾನಂದ ಅಣಜಗಿ ನಿರೂಪಿಸಿದರು.

ಈ ವೇಳೆ ಎಸಿಪಿ ಶಿವನಗೌಡ ಪಾಟೀಲ್, ಪಿಎಸ್ಐ ಶಿವಲಿಂಗಪ್ಪ ಉಮ್ಮನಗೋಳ್, ಪಿಎಸ್ಐ ಭಾರತಿಬಾಯಿ ಧನ್ನಿ, ಸಂತೋಷಮ್ಮ ತಳವಾರ, ಮಲ್ಲಣ್ಣ ಮಾಲಿಪಾಟೀಲ್, ಎಎಸ್ಐ ಚಂದ್ರಾಮಪ್ಪ ಕುಂಬಾರ, ಷಣ್ಮುಖ ಪಂಡಿತ್ ಮಾಂಡುವೆ, ಮಶಾಕ್ ನದಾಫ್, ಸಂತೋಷ್ ಎಸ್ ನಾಯ್ಕೋಡಿ, ಹಾಗೂ ಗಡ್ಡೆಪ್ಪ ಕೋರಿ ಅವರಿಗೆ ಬೆಸ್ಟ್ ಪೊಲೀಸ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ತೊಗರಿಗೆ ಬೆಂಬಲ ಬೆಲೆ ಘೋಷಿಸುವಂತೆ ಒತ್ತಾಯಿಸಿ ಪ್ರತಿಭಟನೆ




ಕಲಬುರಗಿ,ಜ.21-

ತೊಗರಿ ಬೆಳೆಗೆ ಪ್ರತಿ ಟನ್ ಗೆ 12,500 ರೂ. ಬೆಂಬಲ ಬೆಲೆ ಘೋಷಿಸುವಂತೆ ಆಗ್ರಹಿಸಿ, ಸಂಯುಕ್ತ ಹೋರಾಟ - ಕರ್ನಾಟಕ ಸಮಿತಿ ವತಿಯಿಂದ ನೆಹರೂ ಗಂಜ್ ಪ್ರದೇಶದಲ್ಲಿರುವ ಎಪಿಎಂಸಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಈ ಭಾಗದಲ್ಲಿ ಅತಿ ಹೆಚ್ಚು ತೊಗರಿ ಬೆಳೆಯಲಾಗುತ್ತದೆ. ಇಲ್ಲಿನ ಉತ್ಕೃಷ್ಟ ಮಟ್ಟದ ತೊಗರಿಯು ವಿಶ್ವದೆಲ್ಲೆಡೆ ಖ್ಯಾತಿ ಪಡೆದಿದ್ದಲ್ಲದೆ ಜಿಐ ಟ್ಯಾಗ್ ಕೂಡ ಪಡೆದಿದೆ. ಮೂಲ ಆಧಾರವೇ ತೊಗರಿ ಇದ್ದರೂ ಸರಕಾರ ಸ್ವಾಮಿನಾಥನ್ ವರದಿ ಪ್ರಕಾರ ಬೆಂಬಲ ಬೆಲೆ ನೀಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಲು ಉತ್ಪಾದಕರ ಸಹಕಾರ ಸಂಘಗಳ (ಕೆಎಂಎಫ್) ಮಾದರಿಯಲ್ಲಿ ತೊಗರಿ ಖರೀದಿ ಕೇಂದ್ರ ಸ್ಥಾಪಿಸಬೇಕು. ಪ್ರತಿ ಕ್ವಿಂಟಲ್ ತೊಗರಿಗೆ 12,500 ರೂಪಾಯಿ ಬೆಂಬಲ ಬೆಲೆ ನೀಡಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ತಲಾ 1,000 ರೂಪಾಯಿ ಪ್ರೋತ್ಸಾಹಧನ ನೀಡಬೇಕು. ಹೊರ ದೇಶದ ತೊಗರಿಗೆ ಶೇ.50ರಷ್ಟು ಆಮದು ಶುಲ್ಕ ಹಾಕಬೇಕು, ತೊಗರಿ ತುರ್ತು ಖರೀದಿ ಕೇಂದ್ರ ಸ್ಥಾಪನೆ, ಬೆಳೆ ವಿಮೆ ಮಂಜೂರು ಸೇರಿದಂತೆ ಹಲವು ಬೇಡಿಕೆಗಳು ಈಡೇರಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಾಷ್ಟ್ರೀಕೃತ ಬ್ಯಾಂಕುಗಳ ರೈತರ ಸಾಲಮನ್ನಾ ಮಾಡಬೇಕು, ವಿಬಿ ಜಿರಾವ್ ಜಿ ಕಾಯ್ದೆ ಜಾರಿಗೊಳಿಸುತ್ತಿರುವುದನ್ನು ಖಂಡಿಸಿದ ರೈತರು, ಮೊದಲಿನ ನರೇಗಾ ಯೋಜನೆಯನ್ನೇ ಮುಂದುವರೆಸಿಕೊಂಡು ಹೋಗಿ ರೈತರ, ಕೃಷಿ ಕಾರ್ಮಿಕರ ಪರವಾಗಿ ಸರಕಾರ ನಿಲ್ಲಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡರಾದ ಶರಣಬಸಪ್ಪ ಮಮಶೆಟ್ಟಿ, ಮಹೇಶ್ ಎಸ್.ಬಿ., ಭೀಮಾಶಂಕರ್ ಮಾಡ್ಯಾಳ, ಮಹಾಂತೇಶ್ ಜಮಾದಾರ, ಮೌಲಾ ಮುಲ್ಲಾ, ಉಮಾಪತಿ ಪಾಟೀಲ್, ಕರೆಪ್ಪ ಕರಗೊಂಡ, ಸಿದ್ದು ಎಸ್.ಎಲ್, ವಿಠ್ಠಲ ಮಾಕಾ ಸೇರಿದಂತೆ ಹಲವರು ಈ ವೇಳೆ ಉಪಸ್ಥಿತರಿದ್ದರು.


ತೊಗರಿಗೆ ಬೆಂಬಲ ಬೆಲೆ ಘೋಷಣೆ ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಕೆಗಾಗಿ ಆಗ್ರಹಿಸಿ ಜ.22ರಂದು ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ರೈತರ ಎತ್ತಿನ ಬಂಡಿ ಹಾಗೂ ಟ್ರಾಕ್ಟರ್‌ಗಳ ಮೂಲಕ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಸಂಯುಕ್ತ ಹೋರಾಟ ಕರ್ನಾಟಕ ಸಮಿತಿಯ ಮುಖಂಡರು ತಿಳಿಸಿದ್ದಾರೆ.

# ವೀರಭದ್ರೇಶ್ವರ ಜಾತ್ರಾ ಮಹೋತ್ಸವ| ಭಕ್ತರಿಗೆ ತೊಂದರೆಯಾಗದಂತೆ ಅಗತ್ಯ ಕ್ರಮಕೈಗೊಳ್ಳಿ: ಅಧಿಕಾರಿಗಳಿಗೆ ಶಾಸಕ ಡಾ. ಸಿದ್ದು ಪಾಟೀಲ್ ಸೂಚನೆ

ಬೀದರ್,ಜ.21-

ಪಟ್ಟಣದಲ್ಲಿ ನಡೆಯುವ ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಬರುವ ಭಕ್ತರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು. ಎಲ್ಲ ಮೂಲ ಸೌಕರ್ಯಗಳು ಒದಗಿಸಬೇಕು ಎಂದು ಶಾಸಕ ಡಾ. ಸಿದ್ದು ಪಾಟೀಲ್ ಅವರು ತಿಳಿಸಿದರು.

2026ನೇ ಸಾಲಿನ ಪಟ್ಟಣದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಸೋಮವಾರ ಶಾಸಕರ ಕಚೇರಿಯಲ್ಲಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಶಾಸಕ ಡಾ. ಸಿದ್ದು ಪಾಟೀಲ್, ವೀರಭದ್ರೇಶ್ವರ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯುತ್ತಿದ್ದು, ಈ ಜಾತ್ರೆಗೆ ಅಂಧ್ರಪ್ರದೇಶ , ತೆಲಂಗಾಣ , ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಿಂದ ಲಕ್ಷಾದೋಪದಿ ಸಂಖ್ಯೆಗಳಲ್ಲಿ ಭಕ್ತಾದಿಗಳು ಆಗಮಿಸುತ್ತಿದ್ದಾರೆ. ಅವರಿಗೆ ಮೂಲ ಸೌಕರ್ಯ ಒದಗಿಸುವ ಮೂಲಕ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.



ಸ್ವಚ್ಛತೆಗೆ ಆದ್ಯತೆ ನೀಡಬೇಕು. ನೀರಿನ ಸಮಸ್ಯೆ ಎದುರಾಗಬಾರದು. ವಿದ್ಯುತ್ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಹಾಗೆಯೇ ಆರೋಗ್ಯ ಇಲಾಖೆಯವರು ಪಟ್ಟಣದ ಕೆಲವು ಕಡೆಗೆ ಆರೋಗ್ಯ ತಪಾಸಣೆ ಮತ್ತು ಆಂಬುಲೆನ್ಸ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಅವರು ಅಧಿಕಾರಿಗಳಿಗೆ ಹೇಳಿದರು.

ಜಾತ್ರೆಯಲ್ಲಿ ಯಾವುದೇ ರೀತಿಯ ಅಹಿತರಕರ ಘಟನೆ ಹಾಗೂ ಅಕ್ರಮ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೊಲೀಸ್ ಇಲಾಖೆಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಅಂಜುಮ್ ತಬ್ಬಸುಮ್, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ದೀಪಿಕಾ ನಾಯ್ಕರ್, ಪುರಸಭೆ ಮುಖ್ಯಾಧಿಕಾರಿ ವನಿತಾಬಾಯಿ, ತಾಲೂಕು ಆರೋಗ್ಯಾಧಿಕಾರಿ ಡಾ. ಶಿವಕುಮಾರ್, ಲೋಕಪಯೋಗಿ ಎಇಇ ವೆಂಕಟೇಶ್ ಹಾಗೂ ಜೇಸ್ಕಾಂ ಅಧಿಕಾರಿ, ಪೊಲೀಸ್, ಸಾರಿಗೆ ಸೇರಿದಂತೆ ಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ನರೇಗಾ ನೌಕರರಿಗೆ ಸೇವಾ ಭದ್ರತೆ ಒದಗಿಸಿ: ಶಾಸಕ ಬಸವರಾಜ ರಾಯರೆಡ್ಡಿಗೆ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ

ಯಲಬುರ್ಗಾ,ಜ.21-

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೇವಾ ಭದ್ರತೆ ಕಲ್ಪಿಸುವ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಸಬೇಕೆಂದು ಮಹಾತ್ಮ ಗಾಂಧಿ ನರೇಗಾ ನೌಕರರ ಕ್ಷೇಮಾಭಿವೃದ್ದಿ ಸಂಘವು ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಶಾಸಕರಾದ ಬಸವರಾಜ ರಾಯರೆಡ್ಡಿ ಅವರಿಗೆ ಮನವಿ ಸಲ್ಲಿಸಿದೆ.

ಯಲಬುರ್ಗಾ ತಾಲೂಕಿನ ಕಲ್ಲೂರ ಗ್ರಾಮದಲ್ಲಿ ನರೇಗಾ ನೌಕರರು ಶಾಸಕರನ್ನು ಭೇಟಿ ಮಾಡಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ಮನವಿಯಲ್ಲಿ ರಾಜ್ಯದಾದ್ಯಂತ ಸುಮಾರು 5 ಸಾವಿರಕ್ಕೂ ಅಧಿಕ ನರೇಗಾ ಸಿಬ್ಬಂದಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಸೇವಾ ಭದ್ರತೆ ಇಲ್ಲದ



ಕಾರಣ ಅವರ ಕುಟುಂಬಗಳು ತೀವ್ರ ಅಸುರಕ್ಷಿತ ಸ್ಥಿತಿಯನ್ನು ಎದುರಿಸುತ್ತಿವೆ ಎಂದು ಉಲ್ಲೇಖಿಸಲಾಗಿದೆ.

ಕಳೆದ ಹಲವಾರು ವರ್ಷಗಳಿಂದ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಶ್ರಮಿಸುತ್ತಿದ್ದರೂ, ಸಮಯಕ್ಕೆ ಸರಿಯಾಗಿ ವೇತನ ಪಾವತಿ ಆಗದಿರುವುದು ಸಿಬ್ಬಂದಿಗೆ ದೊಡ್ಡ ಸಮಸ್ಯೆಯಾಗಿದ್ದು, ಕುಟುಂಬ ನಿರ್ವಹಣೆ, ವೈದ್ಯಕೀಯ ವೆಚ್ಚ, ಸಾಲಗಳ ಇಎಂಐ ಮರುಪಾವತಿ, ಮಕ್ಕಳ ಶಾಲಾ-ಕಾಲೇಜು ಶುಲ್ಕ ಸೇರಿದಂತೆ ಮೂಲಭೂತ ಅಗತ್ಯಗಳನ್ನು ಪೂರೈಸಲು ತೀವ್ರ ಸಂಕಷ್ಟ ಎದುರಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಬಸವರಾಜ ರಾಯರಡ್ಡಿ, ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಆಗಿರುವ ಬದಲಾವಣೆಗಳ ಕುರಿತು ಸಮಗ್ರ ಚರ್ಚೆ ನಡೆಸಲು ಮುಖ್ಯ ಮಂತ್ರಿಗಳು ಅಧಿವೇಶನ ಕರೆದಿದ್ದಾರೆ ಎಂದು ತಿಳಿಸಿದರು. ಜನವರಿ 22 ರಿಂದ 31ರವರೆಗೆ ನಡೆಯಲಿರುವ ಅಧಿವೇಶನದಲ್ಲಿ ನೌಕರರು ಹಾಗೂ ಕೂಲಿಕಾರರ

ಸಮಸ್ಯೆಗಳ ಕುರಿತು ವಿಸ್ತೃತ ಚರ್ಚೆ ನಡೆಯಲಿದ್ದು, ನರೇಗಾ ನೌಕರರ ಬೇಡಿಕೆಗಳನ್ನೂ ಸದನದಲ್ಲಿ ಪ್ರಸ್ತಾಪಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ನರೇಗಾ ನೌಕರರ ಕ್ಷೇಮಾಭಿವೃದ್ದಿ ಸಂಘದ ತಾಲೂಕು ಅಧ್ಯಕ್ಷ ವಿಜಯಕುಮಾರ ಬಳಿಗಾರ, ಯಲಬುರ್ಗಾ-ಕುಕನೂರ ತಾಲೂಕಿನ ತಾಂತ್ರಿಕ ಸಂಯೋಜಕರಾದ ಸಂತೋಷ ನಂದಾಪುರ, ಸುರೇಶ್ ದೇಸಾಯಿ, ಎಂಐಎಸ್ ಸಂಯೋಜಕ ಗಿರೀಶ್, ಐಇಸಿ ಸಂಯೋಜಕರಾದ ಲಕ್ಷ್ಮಣ ಕೆರಳ್ಳಿ, ಶರಣಪ್ಪ ಹಾಳಕೇರಿ, ತಾಂತ್ರಿಕ ಸಹಾಯಕರಾದ ರಮೇಶ ಹಿರೇಮನಿ, ಕಿರಣಕುಮಾರ, ನಾಗರಾಜ ಹಳ್ಳಿ, ಹುಸೇನ್ ಪಾಷಾ, ಸಂಗಮೇಶ, ಚೇತನ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಒಂದನೇಯ ಪುಟದಿಂದ

### ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪತ್ರಕರ್ತರ ಸಭೆ

## ಪತ್ರಕರ್ತರ ಒತ್ತಾಸೆಯಿಂದಲೇ ರಾಯಚೂರು ಉತ್ಸವ

ಪತ್ರಕರ್ತರಿಗೆ ವಸತಿ ವ್ಯವಸ್ಥೆ, ಸುದ್ದಿ ಸಂಗ್ರಹಕ್ಕೆ ಅನುಕೂಲವಾಗುವಂತೆ ಸಂಚಾರಕ್ಕಾಗಿ ಬಸ್ ವ್ಯವಸ್ಥೆ, ಮೂರೂ ದಿನಗಳ ಕಾಲ ಊಟದ ವ್ಯವಸ್ಥೆ ಹಾಗೂ ಪ್ರವೇಶ ಪಾಸ್‌ಗಳನ್ನು ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಪತ್ರಕರ್ತರಾದ ಆರ್.ಗುರುನಾಥ, ಕೆ.ಸತ್ಯನಾರಾಯಣ, ಚನ್ನಬಸವ ಬಾಗಲವಾಡ, ಚಂದ್ರಕಾಂತ ಮಸಾನಿ, ಅರವಿಂದ ಕುಲಕರ್ಣಿ, ಖಾನ್ ಸಾಬ್ ಮೊಮಿನ್, ರಾಚಯ್ಯ ಸ್ವಾಮಿ, ಸಿದ್ದು ಬಿರಾದಾರ, ಸಿದ್ದಯ್ಯ ಸ್ವಾಮಿ, ವಾಗೀಶ್ ಪಾಟೀಲ ಸೇರಿದಂತೆ ಇನ್ನಿತರರು ಉತ್ಸವ ಸಂಬಂಧಿಸಿದಂತೆ ವಿವಿಧ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಉತ್ಸವ ಪ್ರಚಾರ ಸಮಿತಿಯ ಅಧ್ಯಕ್ಷ ಸಂತೋಷ್ ರಾಣಿ, ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ವಿವಿಧ ಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

### ಜಿರಾಮ್ ಜಿ ಕಾಯ್ದೆ ರದ್ದುಪಡಿಸಲು ಆಗ್ರಹಿಸಿ ಸತ್ಯಾಗ್ರಹ

## ಮನರೇಗಾ ದುರ್ಬಲಗೊಳಿಸುವ ಬಿಜೆಪಿ ನೀತಿಗೆ ಕಾಂಗ್ರೆಸ್ ಆಕ್ರೋಶ

ಇದೇ ವೇಳೆ ವಿಧಾನಪರಿಷತ್ ಸದಸ್ಯ ಎ. ವಸಂತಕುಮಾರ್ ಮಾತನಾಡಿ, ''ಮನರೇಗಾ ಬದಲಾವಣೆಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಳ್ಳಲಿವೆ. ಕಾಂಗ್ರೆಸ್ ಸರ್ಕಾರ ಜನರಿಗೆ ಉದ್ಯೋಗದ ಹಕ್ಕು ನೀಡಿತ್ತು. ಆದರೆ ಬಿಜೆಪಿ ಸರ್ಕಾರ ಅದನ್ನು ಕಸಿದುಕೊಂಡು ಜನರನ್ನು ಜೀತದಾಳುಗಳಂತೆ ಕಾಣುವ ಮನಸ್ಥಿತಿಯನ್ನು ತೋರಿಸುತ್ತಿದೆ. ಇಂತಹ ಜನವಿರೋಧಿ ನೀತಿಗಳನ್ನು ಜನರ ಮುಂದೆ ಬಹಿರಂಗಪಡಿಸಲಾಗುವುದು'' ಎಂದು ಹೇಳಿದರು.

ಕೇಂದ್ರ ಸರ್ಕಾರದ ವಿರುದ್ಧ ದೇಶವ್ಯಾಪಿ ಹೋರಾಟ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಗ್ರಾಮ, ಹೋಬಳಿ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಕಾಂಗ್ರೆಸ್ ನಾಯಕರು ತಿಳಿಸಿದರು.

ಈ ಸಂದರ್ಭದಲ್ಲಿ ಮಹಮ್ಮದ್ ಶಾಲಂ, ಅಸ್ಲಾಂ ಪಾಷಾ, ಶ್ರೀದೇವಿ ನಾಯಕ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸರೆಡ್ಡಿ, ಯುವ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ, ರಜಾಕ್ ಉಸ್ತಾದ್, ರವಿಪಾಟೀಲ್, ಎಪಿಎಂಸಿ ಅಧ್ಯಕ್ಷರಾದ ಜಯಂತರಾವ್ ಪತಂಗೆ, ಮಲ್ಲಿಕಾರ್ಜುನಗೌಡ ತಲಮಾರಿ, ಉಪಾಧ್ಯಕ್ಷ ಬಷೀರ್ ಅಹ್ಮದ್, ಗಿಲ್ಲೆಸೂಗೂರು ಬ್ಲಾಕ್ ಅಧ್ಯಕ್ಷ ಉರುಕುಂದಪ್ಪ ಮಟಮಾರಿ, ಸಿಂಡಿಕೇಟ್ ಸದಸ್ಯರಾದ ಚನ್ನಬಸವ, ಪವನ್ ಪಾಟೀಲ್, ರಾಮಣ್ಣ ಇರಬಗೇರಾ, ಅಯ್ಯಪ್ಪಸ್ವಾಮಿ ಜಾಲಹಳ್ಳಿ

ಪರಿಶಿಷ್ಟ ಜಾತಿ ವಿಭಾಗ ನಗರ ಅಧ್ಯಕ್ಷ ವಿಶ್ವನಾಥ್ ಪಟ್ಟಿ, ವಿಜಯಪ್ರಕಾಶ್, ವೆಂಕಟೇಶ್ ಅರಳಿಕರ್, ಪಾರ್ಥಸಾರಥಿ, ಪರಶುರಾಮಲು, ಸುರೇಶ್ ಪಟ್ಟಿ, ನಾಗೇಶ್ವರರಾವ್, ನರಸಿಂಹಲು ರಾಂಪುರ, ಸತೀಶ್, ಉಮೇಶ್, ರಮೇಶ್, ಚಿನ್ನ ರಾಯುಡು, ಸಿದ್ದಪ್ಪ ರಾಂಪುರ, ಮುದ್ದುಕೃಷ್ಣ ಸೇರಿದಂತೆ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಹಲವರು ಉಪಸ್ಥಿತರಿದ್ದರು.

## ಸಾಮಾಜಿಕ ಪರಿವರ್ತನೆಗಾಗಿ ಹಗಲಿರುಳು ಶ್ರಮಿಸಿದ ನಿಜಶರಣ ಅಂಬಿಗರ ಚೌಡಯ್ಯ - ಬಿ. ಜಯರಾಜ ಕಲ್ಮಾಲ

ಮೂಡಿಸಿದರು. ಎಂದು ಅವರು ಹೇಳಿದರು

ಈ ಸಂದರ್ಭದಲ್ಲಿ ಕೆ ಶರಣಪ್ಪ ರಂಗ ರಾಮಣ್ಣ ಯಲ್ಲಪ್ಪ ಓತಪಟ್ಟಿ ಉಮೇಶ್ ವಾಲೇಕರ್ ಗಂಗಪ್ಪ ದನ ಕಾಯಿ ತಾಯಣ್ಣ ಪೋತುಕಲ್ ನಾಗರಾಜ್ ದಳವಾಯಿ ರವಿ ವಾಲೇಕರ್

ಅರ್ಜುನ್ ಧನ ಕಾಯಿ ಗುಂಡಪ್ಪ ಗೌಡ ನಾಡಗೌಡ ಖಾಜಾ ಹುಸೇನ್ ಅಲ್ಲಮಪ್ರಭು ಹಾಗೂ ಸಮಸ್ತ ಸಮಾಜ ಬಾಂಧವರು ವಿವಿಧ ಪಕ್ಷದ ಮುಖಂಡರು ಯುವಕರು ಉಪಸ್ಥಿತರಿದ್ದರು

## ಅಂಬಿಗರ ಚೌಡಯ್ಯನವರ ಜೀವನ ಮೌಲ್ಯಗಳನ್ನು ಅರಿಯೋಣ: ಸಚಿವ ಬೋಸರಾಜು ಸಲಹೆ

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ಸಮಾಜದ ಮುಖಂಡರಾದ ಕೆ.ಶರಣಪ್ಪ, ಲಲಿತಾ ಕಡಗೋಳ, ಶರಣಪ್ಪ ಕಡಗೋಳ, ಕುರ್ಡಿ ಲಕ್ಷ್ಮಣ, ರಂಗ ದೇಸಾಯಿ, ರಾಜೇಶ್ವರಿ ಸೇರಿದಂತೆ ಇತರರು ಇದ್ದರು.

ಗಣ್ಯರಿಂದ ಮಾಲಾರ್ಪಣೆ: ವೇದಿಕೆಯ ಕಾರ್ಯಕ್ರಮಕ್ಕೂ ಮೊದಲು ನಗರದ ಬಿ.ಆರ್.ಬಿ. ಸರ್ಕಲ್ ಹತ್ತಿರವಿರುವ ಅಂಬಿಗರ ಚೌಡಯ್ಯನವರ ಪುತ್ಥಳಿ ನಡೆದ ಕಾರ್ಯಕ್ರಮದಲ್ಲಿ ಕಿಲ್ಲೇ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮೀಜಿ, ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ ವೀರಶಿವಾಚಾರ್ಯ ಸ್ವಾಮೀಜಿ ಹಾಗೂ ಸಚಿವರಾದ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇರಿದಂತೆ, ಮಾಜಿ ಸಂಸದರಾದ ಬಿ.ವಿ.ನಾಯಕ, ಮಾಜಿ ಶಾಸಕರಾದ ಎ.ಪಪ್ಪರೆಡ್ಡಿ, ರಾಯಚೂರು ನಗರಸಭೆಯ ಮಾಜಿ ಅಧ್ಯಕ್ಷರಾದ ಲಲಿತಾ ಕಡಗೋಳ, ಮುಖಂಡರಾದ ಕೆ.ಶಾಂತಪ್ಪ, ಕೆ.ಶರಣಪ್ಪ, ಕುರ್ಡಿ ಲಕ್ಷ್ಮಣ, ಹೊನ್ನಪ್ಪ, ಶ್ರೀನಿವಾಸ್, ಪಿ.ಪರಮೇಶ್, ಕೆ.ತಿಮ್ಮಪ್ಪ, ಪಿ.ಈರೇಶ, ಈರೇಶ ಜಾಲಗೇರಿ, ಕೆ.ನರಸಿಂಹ, ಇ.ಶಿವರಾಮ್, ಹನುಮಂತು ಕಡಗೋಳ ಸೇರಿದಂತೆ ಇತರರು ಅಂಬಿಗರ ಚೌಡಯ್ಯನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

## 28 ಕೋಟಿ ದುಡಿಯುವ ಬಂಡವಾಳ ಹೊಂದಿದೆ - ಅಮರಗುಂಡಯ್ಯ

ನೆರವೇರಿಸಲಾಯಿತು. ಸಹಕಾರಿ ಸಿಇಓ ಅಮರಗುಂಡಯ್ಯ ಮಾತನಾಡಿ ಈ ಸಹಕಾರಿಯೂ ಪ್ರಾರಂಭವಾಗಿ 6 ವರ್ಷದಲ್ಲಿ 3600 ಸದಸ್ಯರನ್ನು ಹೊಂದಿದ್ದೂ, ಒಟ್ಟು 28 ಕೋಟಿ ದುಡಿಯುವ ಬಂಡವಾಳದೊಂದಿದೆ. ಸಿರವಾರ ಜೊತೆಗಡ ದೇವದುರ್ಗ ಮತ್ತು ಹುಣಸಿಗಿ ಪಟ್ಟಣಗಳಲ್ಲಿ ಶಾಖೆಗಳನ್ನು ಕಳೆದ ಮೂರು ವರ್ಷಗಳಿಂದ ಪ್ರಾರಂಭಿಸಲಾಗಿದೆ. ಗ್ರಾಹಕರು ಇದೇ ರೀತಿ ಸಹಕಾರಿ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ನಾಗಪ್ಪ ಗೌಡ ಚಾಗಭಾವಿ, ಉಪಾಧ್ಯಕ್ಷ ಚಂದ್ರಶೇಖರಯ್ಯ ಸ್ವಾಮಿ ಹಿರೇಮಠ್, ಆಡಳಿತ ಮಂಡಳಿಯ ಸದಸ್ಯರಾದ ಸಂಗಪ್ಪಗೌಡ ಕಡದಿನ್ನಿ, ಮುರಗೇಂದ್ರ ಸ್ವಾಮಿ ಸಾರಂಗಮಠ, ಶಿವಲೀಲಾ ಹಿರೇಮಠ, ಗುರುದೇವಮ್ಮ ಸಿ, ನೇತ್ರಾವತಿ ಸಾರಂಗಮಠ, ವೈಶಾಲಿ ಬೃಹನಮಠ ಹಸಮಕಲ್ , ತನುಜಾ ಪಾಟೀಲ್ , ಬಸವರಾಜುಗೌಡ ಕನ್ನಡ, ಭೀಮರೆಡ್ಡಿ ಗೌಡ ಗಣದಿನ್ನಿ, ವಿಶ್ವನಾಥ ಸ್ವಾಮಿ ಜಡಲದಿನ್ನಿ , ರಾಜಶೇಖರಯ್ಯ ಸಾಲಿಮಠ, ಮಲ್ಲಪ್ಪ ಎನ್, ಸಚಿನ್ ಕುಮಾರ ದೊಡ್ಡಮನಿ, ಅರುಣ್ ಕುರ್ಮಾ ಪಾಟೀಲ್ ಕಡದಿನ್ನಿ, ಮಲ್ಲಿಕಾರ್ಜುನ ಗೌಡ ಗಣದಿನ್ನಿ,

## ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬೀನ್ ಅಧಿಕಾರ ಸ್ವೀಕಾರ : ಬೀದರ್‌ನಲ್ಲಿ ಕಾರ್ಯಕರ್ತರಿಂದ ವಿಜಯೋತ್ಸವ

ಬೀದರ್,ಜ.21-

ಭಾರತೀಯ ಜನತಾ ಪಕ್ಷದ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಿತಿನ್ ನಬೀನ್ ಅವರು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ, ಬೀದರ್ ನಗರದಲ್ಲಿ ಬಿಜೆಪಿ ಪಕ್ಷದ ಕಾರ್ಯಕರ್ತರು ಸಂಭ್ರಮದ ವಿಜಯೋತ್ಸವ ಆಚರಿಸಿದರು.

ಬಿಜೆಪಿ ಪಕ್ಷದ ಬೀದರ್ ನಗರಾಧ್ಯಕ್ಷ ಶಶಿ ಹೊಸಳ್ಳಿ ಅವರ ನೇತೃತ್ವದಲ್ಲಿ ನಗರದ ಶಿವಾಜಿ ವೃತ್ತದಲ್ಲಿ ನಡೆದ ವಿಜಯೋತ್ಸವದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮ ವ್ಯಕ್ತಪಡಿಸಿದರು.

ಈ ವೇಳೆ ಶಶಿ ಹೊಸಳ್ಳಿ ಅವರು ಮಾತನಾಡಿ, ನಿತಿನ್ ನಬೀನ್ ಅವರ ನಾಯಕತ್ವವು ಭಾರತೀಯ ಜನತಾ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವುದರ ಜೊತೆಗೆ ಎನ್ಡಿಎ ಮೈತ್ರಿಕೂಟವನ್ನು ಮತ್ತಷ್ಟು ಸದೃಢಗೊಳಿಸಲಿದೆ. ಮುಂಬರುವ ತಮಿಳುನಾಡು, ಕೇರಳ ಹಾಗೂ ಅಸ್ಸಾಂ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷವು ಯಶಸ್ವಿಯಾಗಿ ಮುನ್ನಡೆಸಲು ಅವರ ಸಂಘಟನಾ ಚಾತುರ್ಯ ಮತ್ತು ರಾಜಕೀಯ ಅನುಭವ ಮಾರ್ಗದರ್ಶಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಬುಡಾ ಅಧ್ಯಕ್ಷ ಬಾಬುವಾಲಿ ಅವರು ಮಾತನಾಡಿ, ನಿತಿನ್ ನಬೀನ್ ಅವರು ಸತತ ಐದು ಬಾರಿ ಶಾಸಕರಾಗಿ ಜನಮನ್ನಣೆ ಪಡೆದು, ಬಿಹಾರ ಸರಕಾರದಲ್ಲಿ ಲೋಕೋಪಯೋಗಿ ಸಚಿವರಾಗಿ ಜವಾಬ್ದಾರಿಯುತ'ವಾಗಿ ಕಾರ್ಯನಿರ್ವಹಿಸಿದ್ದಾರೆ.

ಪಕ್ಷ ಸಂಘಟನೆಗೆ ಅವರು ನೀಡಿರುವ ಮಹತ್ವದ ಕೊಡುಗೆ, ಸಂಘಟನಾ ಚಾತುರ್ಯ ಹಾಗೂ ಶುದ್ಧ ಸಾರ್ವಜನಿಕ ಜೀವನದ ಹಿನ್ನೆಲೆ ಯಿಂದಾಗಿ, ಭಾರತೀಯ ಜನತಾ ಪಕ್ಷದ ಇತಿಹಾಸದಲ್ಲೇ ಅತ್ಯಂತ ಕಿರಿಯ ರಾಷ್ಟ್ರೀಯ ಅಧ್ಯಕ್ಷರು ಎಂಬ ಗೌರವಕ್ಕೆ ಅವರು ಪಾತ್ರರಾಗಿದ್ದಾರೆ. ಅವರ ನಾಯಕತ್ವದಲ್ಲಿ ಪಕ್ಷವು ಸಂಘಟನಾತ್ಮಕವಾಗಿ ಇನ್ನಷ್ಟು ಸಶಕ್ತವಾಗಲಿದೆ ಎಂದರು.

ಈ ವಿಜಯೋತ್ಸವ ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ಮುಖಂಡ ನಂದಾಕಿಶೋರ ವರ್ಮಾ, ಗುರುನಾಥ್ ಜಾಂತಿಕರ್, ರಾಜರಾವ್ ಚಿಟ್ಟಾ, ಗಣೇಶ್ ಭೋಸ್ಲೆ, ಸುನಿಲ್ ಗೌಳಿ, ರೋಷನ್ ವರ್ಮಾ, ನಿತಿನ್ ನವಲಕಲೆ, ನರೇಶ್ ಗೌಳಿ, ವೀರೇಶ್ ಸ್ವಾಮಿ, ಭೂಷಣ ಪಾಠಕ, ಪವನ್ ಉಂಡೆ, ಸಂಗಮೇಶ್ ಗುಮ್ಮಾ, ನೀತಿನ್ ಕರ್ಪೂರ, ಆನಂದ್ ಘಂಟಿ, ಸಂಜು ಘನಾತೆ, ಕಾಶಿನಾಥ್, ಗೋಪಾಲ್ ಕುಕುಡಾಳ್, ಸುದರ್ಶನ್, ಆಕಾಶ್ ಮಮದಾಪುರ್, ಬಾಲಾಜಿ ಪಾಟೀಲ್, ಸಂಜು ಜೀರಿಗೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಮಾಜದಲ್ಲಿ ಸಮಾನತೆ ಮೂಡಿಸಲು ಮಹನೀಯರ ತತ್ವಗಳು ದಾರಿದೀಪ : ಪಿ.ಗಾದೆಪ್ಪ



ಬಳ್ಳಾರಿ,ಜ.21-

ಮಹನೀಯರ ಆದರ್ಶ ಬದುಕು ಮತ್ತು ಅವರ ತತ್ವಗಳನ್ನು ಇಂದಿನ ಯುವಜನತೆಗೆ ತಲುಪಿಸುವ ಮೂಲಕ ಸಮಾಜದಲ್ಲಿ ಸಮಾನತೆ ಹಾಗೂ ಸೌಹಾರ್ದತೆ ಮೂಡಿಸಲು ರಾಜ್ಯ ಸರ್ಕಾರವು ಜಯಂತಿ ಕಾರ್ಯಕ್ರಮಗಳನ್ನು ಆಚರಿಸುತ್ತಿದೆ ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಹೇಳಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಸೋಮವಾರ ಆಯೋಜಿಸಲಾಗಿದ್ದ 'ಮಹಾಯೋಗಿ ವೇಮನ ಜಯಂತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹನೀಯರ ತತ್ವಗಳನ್ನು ಕೇವಲ ಭಾಷಣಕ್ಕೆ ಸೀಮಿತಗೊಳಿಸದೆ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಮಾತನಾಡಿ, ಕನ್ನಡಕ್ಕೆ ಸರ್ವಜ್ಞ ಹಾಗೂ ತಮಿಳಿಗೆ ತಿರುವಳ್ಳುವರ್ ಅವರಂತೆ ತೆಲುಗು ಸಾಹಿತ್ಯಕ್ಕೆ ಮಹಾಯೋಗಿ ವೇಮನರು ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಜಾತೀಯತೆ, ಅಂಧಶ್ರದ್ಧೆ ಮತ್ತು ಮೇಲು-ಕೀಳುಗಳನ್ನು ತಮ್ಮ ಪದ್ಯಗಳ ಮೂಲಕ ಧಿಕ್ಕರಿಸಿದ ಅವರು ಲೋಕಕ್ಕೆ ಮಾರ್ಗದರ್ಶಿಯಾಗಿದ್ದರು ಎಂದರು.

ಮಲಪನಗುಡಿ ಸರ್ಕಾರಿ ಶಾಲೆಯ ಮುಖ್ಯಗುರುಗಳಾದ ಶೇಖರ ಗಿರಡ್ಡಿ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಸಂವಿಧಾನದ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು. ನಿಹಾರಿಕಾ ಅವರಿಂದ ಭರತನಾಟ್ಯ ಹಾಗೂ ಹಿಮಬಿಂದು ಅವರಿಂದ ಗಾಂಧಾರಿ ಕಲೆ ಪ್ರದರ್ಶನಗೊಂಡು ಜನರ ಮೆಚ್ಚುಗೆ ಗಳಿಸಿದವು. ದೊಡ್ಡಬಸಪ್ಪ ಗವಾಯಿ ತಂಡದವರಿಂದ ಭಕ್ತಿ ಸಂಗೀತ ಹಾಗೂ ವೇಮನ ಪದ್ಯಗಳ ಗಾಯನ ಜರುಗಿತು.

ಜಯಂತಿಯ ಅಂಗವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ರೆಡ್ಡಿ ಜನ ಸಂಘದ ಆವರಣದಿಂದ ಆರಂಭವಾದ ಮೆರವಣಿಗೆಯು ಗಡಿಗಿ ಚೆನ್ನಪ್ಪ ವೃತ್ತ, ರೈಲ್ವೆ ನಿಲ್ದಾಣ ರಸ್ತೆ, ಹಳೆಯ ಡಿಸಿ ಕಚೇರಿ ರಸ್ತೆ ಹಾಗೂ ಗವಿಯಪ್ಪ ವೃತ್ತದ ಮೂಲಕ ಸಾಗಿ ರಂಗಮಂದಿರವನ್ನು ತಲುಪಿತು.

ಈ ಸಂದರ್ಭದಲ್ಲಿ ರೆಡ್ಡಿ ಜನ ಸಂಘದ ಜಿಲ್ಲಾಧ್ಯಕ್ಷ ಎನ್. ಪ್ರತಾಪ್ ರೆಡ್ಡಿ, ತಹಶೀಲ್ದಾರ್ ಶಾಷಾವಲಿ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಬಸರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ ಸೇರಿದಂತೆ ಸಮಾಜದ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಫುಲೆ ದಂಪತಿ ಸ್ಮರಣೀಯರು

ಬಾಗಲಕೋಟೆ,ಜ.21-

ನಗರದ ದೀಪು ದೀಕ್ಷಾ ಕ್ರೀಡಾ ಮತ್ತು ಸಾಂಸ್ಕೃತಿಕ ಶಿಕ್ಷಣ ಸಂಸ್ಥೆ ನಗರಸಭೆ ಹತ್ತಿರದ ಅಂಬೇಡ್ಕರ್ ಭವನದಲ್ಲಿ ಈಚೆಗೆ ನಡೆದ ಸಾವಿತ್ರಿ ಬಾಯಿ ಫುಲೆ ಅವರ 195ನೇ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದರು.

ದೀಪು ದೀಕ್ಷಾ ಸಂಸ್ಥೆ ಸಮಾಜ ಮುಖಿ ಕಾರ್ಯಗಳಿಗೆ ಸದಾ ನನ್ನ ಬೆಂಬಲ ಇರುತ್ತದೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಸಮಾಜದ ಮೇಲ್ವರ್ಗದ ವಿರೋಧದ ನಡುವೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲ ಸ್ವಾಭಿಮಾನದ ಬೀಜ ಬಿತ್ತಿದ ಸಾವಿತ್ರಿ ಬಾಯಿ ಅವರ ಪ್ರಯತ್ನ ಸದಾ ಸ್ಮರಣೀಯವಾದುದು' ಎಂದರು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಆರ್.ಮೋಹನರಾಜು ಉಪ'ನ್ಯಾ ಸ ನೀಡಿದರು. ಸವಿತಾ ಅಶೋಕ ಚಲವಾದಿ ಪ್ರಾಸ್ತಾವಿಕ ಮಾತನಾಡಿ, ದೀಪು ದೀಕ್ಷಾ ಸಂಸ್ಥೆಯ ಸೇವಾ ಕಾರ್ಯಗಳನ್ನು ವಿವರಿಸಿದರು.

ದೀಪು ದೀಕ್ಷಾ ಸಂಸ್ಥೆಯ ಅಧ್ಯಕ್ಷ ಅಶೋಕ ಚಲವಾದಿ, ವಿಜಯಮಹಾಂತೇಶ ಗದ್ದನಕೇರಿ, ಇತರರು ಇದ್ದರು.



## ತೊಗರಿಗೆ ಬೆಂಬಲ ಬೆಲೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಭಾ ನಡೆಸುತ್ತಿದ್ದ ಧರಣಿ ತಾತ್ಕಾಲಿಕ ಸ್ಥಗಿತ

ಆಳಂದ,ಜ.21-


ತಾಲೂಕಿನ ತಡೋಳಾ ಗ್ರಾಮದಲ್ಲಿ ಜಾರಿಗೊಳಿಸಿರುವ ಪ್ರಧಾನ ಮಂತ್ರಿ ಜಲಸಿಂಚಾಯಿ ಯೋಜನೆಯ ಕಾಮಗಾರಿ ಪೂರ್ಣಗೊಳಿಸಬೇಕು ಹಾಗೂ ತೊಗರಿಯನ್ನು ಪ್ರತಿ ಕ್ವಿಂಟಾಲಿಗೆ 10 ಸಾವಿರ ರೂ. ಬೆಲೆಯಲ್ಲಿ ಖರೀದಿ ಮಾಡಬೇಕು ಎಂದು ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಭಾ ತಾಲೂಕು ಘಟಕದ ಆಶ್ರಯದಲ್ಲಿ ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಎದುರು ಸೋಮವಾರ ಧರಣಿ ಸತ್ಯಾಗ್ರಹ ನಡೆಯಿತು.

ಧರಣಿ ತಹಶೀಲ್ದಾರ್ ಅಣ್ಣಾರಾವ್ ಪಾಟೀಲ್ ಹಾಗೂ ಸಹಾಯಕ ಪ್ರಭಾರಿ ಕೃಷಿ ನಿರ್ದೇಶಕ ಬನಸಿದ್ದ ಬಿರಾದಾರ ತೆರಳಿ ಸ್ಥಳೀಯ ಮಟ್ಟದ ಬೇಡಿಕೆಗಳನ್ನು ಈಡೇರಿಸಲಾಗುವುದು ಹಾಗೂ ಉಳಿದ ಬೇಡಿಕೆಗಳನ್ನು ಸರಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಭರವಸೆ ನೀಡಿದರು. ಕಾಲಾವಕಾಶ ಕೇಳಿದ ಹಿನ್ನೆಲೆಯಲ್ಲಿ ಅನಿರ್ದಿಷ್ಟಾವಧಿ ಧರಣಿಯನ್ನು ತಾತ್ಕಾಲಿಕವಾಗಿ ಒಂದು ದಿನಕ್ಕೆ ಹಿಂದಕ್ಕೆ ಪಡೆಯಲಾಯಿತು.

ಈ ವೇಳೆ ಮಾತನಾಡಿದ ಕಿಸಾನ್ ಸಭಾ ರಾಜ್ಯ ಕಾರ್ಯಾಧ್ಯಕ್ಷ ಮೌಲಾ ಮುಲ್ಲಾ, ಕಳೆದ ಐದು ವರ್ಷಗಳಿಂದ ಪ್ರಧಾನಮಂತ್ರಿ ಜಲಸಿಂಚಾಯಿ ಯೋಜನೆಯಡಿ ತಡೋಳಾ ಗ್ರಾಮದಲ್ಲಿ ಪ್ರಾರಂಭಗೊಂಡ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ ಎಂದು ಆರೋಪಿಸಿದರು.

ತೊಗರಿ ಸದ್ಯ ಮಾರುಕಟ್ಟೆಯಲ್ಲಿ ಕ್ವಿಂಟಾಲಿಗೆ 7,000ಕ್ಕೆ ಮಾತ್ರ ತೊಗರಿ ಮಾರಾಟವಾಗುತ್ತಿದೆ. ಸರಕಾರ 8,000 ಬೆಲೆ ನಿಗದಿಪಡಿಸಿದ್ದರೂ ಖರೀದಿ ಕೇಂದ್ರಗಳು ಇನ್ನೂ ಆರಂಭವಾಗಿಲ್ಲ. ಇದರಿಂದ ರೈತರು ಭಾರೀ ನಷ್ಟ ಅನುಭವಿಸುತ್ತಿದ್ದಾರೆ ಎಂದು ಮೌಲಾ ಮುಲ್ಲಾ ಹೇಳಿದರು.

ಈ ಸಂದರ್ಭದಲ್ಲಿ ಕಿಸಾನ್ ಸಭಾ ತಾಲೂಕು ಉಪಾಧ್ಯಕ್ಷೆ ಕಲ್ಯಾಣಿ ಅವುಟೆ, ತಾಲೂಕು ಉಪಾಧ್ಯಕ್ಷ ರಾಜಶೇಖರ ಬಸ್ಮೆ ಹಿರೋಳಿ, ಮಹಾದೇವ ಪೂಜಾರಿ, ತುಕಾರಾಮ ಕುಂಬಾರ, ರಮೇಶ ಅವುಟೆ, ಫಕ್ರುದ್ದೀನ್ ಗೋಳಾ ಸೇರಿದಂತೆ ಹಲವು ರೈತ ಮುಖಂಡರು ಇದ್ದರು.



## ಖರೀದಿ ಕೇಂದ್ರ ಜೋಳದ ಕುರಿತು ಚರ್ಚಿಸಿದ ಬಸನಗೌಡ ಬಾದರ್ಲಿ

ಸಿಂಧನೂರು,ಜ.20-

2025-2026. ನೇಯ ಸಾಲಿನ ಮುಂಗಾರು ಹಂಗಾಮೀನ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ. ರಾಯಚೂರು ಜಿಲ್ಲೆಯಲ್ಲಿ ರೈತರು ಜೋಳ ಖರೀದಿ ಕೇಂದ್ರದ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗಮನಿಸಿ. ಇಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರಾದ. ಶ್ರೀ ಕೆಎಚ್ ಮುನಿಯಪ್ಪ. ಇವರನ್ನು ಕರ್ನಾಟಕ ವಿಧಾನ ಪರಿಷತ್ ಶಾಸಕರಾದ. ಶ್ರೀ ಬಸನಗೌಡ ಬಾದರ್ಲಿ ಅವರು. ಭೇಟಿಯಾಗಿ. ರಾಯಚೂರು ಜಿಲ್ಲೆಯ ರೈತರ ಜೋಳ ಖರೀದಿ ಕೇಂದ್ರದ ಸಮಸ್ಯೆಗಳ ಬಗ್ಗೆ. ಚರ್ಚೆ ನಡೆಸಿ. ಶೀಘ್ರದಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಲು. ಹಾಗೂ ಸಿಂಧನೂರು ತಾಲೂಕಿನ ರೌಡಕುಂದ. ಮತ್ತು ಸಾಲಗುಂದ.ಜೋಳ ಖರೀದಿ ಕೇಂದ್ರದ. ಸಮಸ್ಯೆಗಳನ್ನು ಕೂಡ ಬಗೆಹರಿಸುವಂತೆ. ಸಚಿವರೊಂದಿಗೆ ಚರ್ಚಿಸಿ. ಕೂಡಲೇ ಸಮಸ್ಯೆ ಬಗೆಹರಿಯುಸುವಂತೆ. ಬಸನಗೌಡ ಬಾದರ್ಲಿ ಅವರು ಸಚಿವರಿಗೆ ಒತ್ತಾಯಿಸಿದರು

## ಸಿರುಗುಪ್ಪ:ಸ್ವಚ್ಛತಾ ವಾಹಿನಿ ನೌಕರರಿಗೆ ಸಂಬಳ ಕೊಡಿ ಒತ್ತಾಯಿಸಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಪವನ್ ಕುಮಾರ್,ಎಸ್.ದಂಡಪ್ಪನವರ್ ರಿಗೆ ಕಾರ್ಮಿಕರಿಂದ ಮನವಿ ಪತ್ರ



ಸಿರುಗುಪ್ಪ-ತಾಲೂಕು ಗ್ರಾಮ ಪಂಚಾಯತ್ ನೌಕರರ ಸಂಘ ಸಿ ಐ ಟಿ ಯು ಸಂಯೋಜಿತ ಇವರಿಂದ ಗ್ರಾಮ ಪಂಚಾಯತ್ ಸ್ವಚ್ಚ ವಾಹಿನಿ ಚಾಲಕರು ಕಾರ್ಮಿಕರಿಗೆ ಸರ್ಕಾರದ ಆದೇಶ ಮತ್ತು ನಿಯಮ ಧನ್ವಯ ವೇತನ ನೀಡುವಂತೆ ಒತ್ತಾಯಿಸಿ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪವನ್ ಕುಮಾರ್ ಎಸ್ ದಂಡಪ್ಪನವರ್ ಅವರಿಗೆ ಮನವಿ ಪತ್ರವನ್ನು ತಾಲೂಕು ಸಮಿತಿ ಅಧ್ಯಕ್ಷ ವೆಂಕಟಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಜಿಲಾನ್ ಬಾಷಾ, ಖಜಾಂಚಿ ಟಿ. ಮೊಹಮ್ಮದ್ ಬಾಷಾ, ಸ್ವಚ್ಛವಾಹಿನಿ ನೌಕರರ ಸಂಘದ ಪದಾಧಿಕಾರಿ ಕರಿಯಪ್ಪ, ಸ್ವಚ್ಛವಾಹಿನಿ ನೌಕರ ತಾಯಮ್ಮ ಅವರ ಸಮ್ಮುಖದಲ್ಲಿ ಸಲ್ಲಿಸಲಾಯಿತು



ಅಖಿಲ ಭಾರತ ವೀರಶೈವ ಲಿಂಗಾಯತ. ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ. ಸನ್ಮಾನ್ಯ ಶ್ರೀ. ಈಶ್ವರ್ ಖಂಡ್ರೆ. ಯವರನ್ನು. ಕರ್ನಾಟಕ ವಿಧಾನ ಪರಿಷತ್ ಶಾಸಕರಾದ. ಶ್ರೀ ಬಸನಗೌಡ ಬಾದರ್ಲಿ ಅವರು. ಭೇಟಿಯಾಗಿ. ಅಭಿನಂದನೆಗಳನ್ನು ಸಲ್ಲಿಸಿದರು. ಸಮಾಜದ ಬಾಂಧವರನ್ನು ಒಗ್ಗೂಡಿಸುವ. ಮತ್ತು ಬಸವಾದಿ ಶರಣರ ತತ್ವಗಳನ್ನು ಸಾರುವ. ಮಹಾಸಭೆಯ ಜವಾಬ್ದಾರಿಯ ಹೊಣೆಯನ್ನು. ವಹಿಸಿಕೊಂಡಿರುವುದು ಸಂತಸದ ವಿಚಾರವಾಗಿದ್ದು. ಸಮಾಜದ ಏಳಿಗೆ. ಸಂಘಟನೆ ಹಾಗೂ ಶೈಕ್ಷಣಿಕ ಪ್ರಗತಿಗಾಗಿ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ. ಹಮ್ಮಿಕೊಳ್ಳುವ ಕಾರ್ಯಗಳು ನಿಮ್ಮ ನೇತೃತ್ವದಲ್ಲಿ. ಮತ್ತಷ್ಟು ಯಶಸ್ವಿಯಾಗಲಿ ಎಂದು. ಹಾರೈಸಿದರು.



## 907ನೇ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸ ವ ಭವ್ಯ ಮೆರವಣಿಗೆ

ಸಿರುಗುಪ್ಪ ,ಜ.20-

ಕರ್ನಾಟಕ ಸರ್ಕಾರ ತಾಲೂಕು ಆಡಳಿತ ತಾಲೂಕು ಪಂಚಾಯತ್ ನಗರ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಲ್ಲಾ ಇಲಾಖೆಗಳ ಮತ್ತು ಕೋಲಿ ಸಮಾಜದವರ ಸಂಯುಕ್ತ ಆಶ್ರಯದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ 907ನೇ ಜಯಂತೋತ್ಸ ವ ಸಿರುಗುಪ್ಪ ನಗರದ ದೇಶನೂರು ರಸ್ತೆ ನಿಜಶರಣ ಅಂಬಿಗರ ಚೌಡಯ್ಯನವರ ವೃತ್ತದಿಂದ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ ಎಂ ನಾಗರಾಜ ಅವರು ನಿಜಶರಣ ಅಂಬಿಗರ ಚೌಡಯ್ಯ ಅವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಿದರು.

ತಾಲೂಕ ಕಾರ್ಯನಿರ್ವಾಹಕ ದಂಡಾಧಿಕಾರಿ ತಹಶೀಲ್ದಾರ್ ಗೌಸಿಯಾ ಬೇಗಂ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪವನ್ ಕುಮಾರ್ ಎಸ್ ದಂಡಪ್ಪನವರ್ ನಗರ ಸಭೆ ಪೌರಾಯುಕ್ತ ಗಂಗಾಧರ ಹಿಂದುಳಿದ ವರ್ಗಗಳ ತಾಲ್ಲೂಕು ಕಲ್ಯಾಣ ಅಧಿಕಾರಿ ಕೆ ಮಲ್ಲಿಕಾರ್ಜುನ ಮಹರ್ಷಿ ವಾಲ್ಮೀಕಿ ವಿದ್ಯಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರು ಬಿ ಎಂ ಸತೀಶ್ ಡಾ ಬಿ ಆರ್ ಅಂಬೇಡ್ಕರ್ ಸಂಘದ ತಾಲೂಕ ಅಧ್ಯಕ್ಷರು ಕೊಡ್ಲೆ ಮಲ್ಲಿಕಾರ್ಜುನ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಲೋಕ ಶಿಕ್ಷಣ ನಿರ್ದೇಶನಾಲಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಶಾಂತಿ ಸಭೆ ಸದಸ್ಯರು ಸಮಾಜ ಸುಧಾರಕ ಅಬ್ದುಲ್ ನಬಿ ನಗರಸಭೆ ಮಾಜಿ ಸದಸ್ಯರಾದ ಕಾಯಿಪಲ್ಲೆ ನಾಗರಾಜ ಹೆಚ್ ಗಣೇಶ್ ಮಾಜಿ ಸದಸ್ಯ ಸುಣಕಲ್ ಮುದುಕಪ್ಪ ಅಮಾಜಪ್ಪ ಕಬ್ಬೇರು ಕೋಲಿ ಸಮಾಜದ ನಿಜಶರಣ ಅಂಬಿಗರ ಚೌಡಯ್ಯ ತಾಲೂಕ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಪದಾಧಿಕಾರಿಗಳು ಎಲ್ಲಾ ಸದಸ್ಯರು ಸಮುದಾಯದ ಮುಖಂಡರು ಪತ್ರಿಕಾಮಾಧ್ಯಮ ಮಿತ್ರರು ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ಜನಪ್ರತಿನಿಧಿಗಳು ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ನಿಮ್ಮೂರು ಸುದ್ದಿ

## ಸಂಪಾದಕೀಯ

# ಸೈನಾ ನೆಹ್ವಾಲ್ 'ಹಿಸ್ಸಾರನಿಂದ ವಿಶ್ವದ ನಂಬರ್ 1 ಪಟ್ಟ ಪಡೆದ ಛಲಗಾರ್ತಿ



ಹಿಸ್ಸಾ ರ್‌ನಿಂದ ವಿಶ್ವದ ನಂಬರ್ 1 ಪಟ್ಟದವರೆಗೆ ಸಾಗಿದ ಸೈನಾ ನೆಹ್ವಾಲ್ ಪಯಣ ಅದ್ಭುತ. ಒಲಿಂಪಿಕ್ಸ್ ನಲ್ಲಿ ಪದಕ ಗೆದ್ದು, ಚೀನಿಯರ ಕೋಟೆ ಭೇದಿಸಿ, ಭಾರತೀಯ ಬ್ಯಾಡ್ಮಿಂಟನ್ ಇತಿಹಾಸವನ್ನೇ ಬದಲಿಸಿದ ಈ ಸೂಪರ್ ಸೈನಾ ಸಾಧನೆ, ಯುವ ಪೀಳಿಗೆಗೆ ಸದಾ ಹಸಿರಾದ ಸ್ಫೂರ್ತಿಯ ಸೆಲೆ

ಭಾರತೀಯ ಕ್ರೀಡಾ ಇತಿಹಾಸದಲ್ಲಿ ಕೆಲವೇ ಕೆಲವು ಹೆಸರುಗಳು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುತ್ತವೆ. ಅಂತಹ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಹೆಸರು ಸೈನಾ ನೆಹ್ವಾಲ್. ಕ್ರಿಕೆಟ್ ಮೋಹದಲ್ಲಿ ಮುಳುಗಿದ್ದ ಭಾರತೀಯರಿಗೆ ಬ್ಯಾಡ್ಮಿಂಟನ್ ರಾಕೆಟ್ ಹಿಡಿಯುವಂತೆ ಪ್ರೇರೇಪಿಸಿದ, ಚೀನಿಯರ ಪ್ರಾಬಲ್ಯವಿದ್ದ ಕೋರ್ಟ್‌ನಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದ ಧೀರ ಕುವರಿ ಸೈನಾ. ಹರಿಯಾಣದ ಹಿಸ್ಸಾ ರ್‌ನಲ್ಲಿ ಹುಟ್ಟಿ, ಹೈದರಾಬಾದ್‌ನಲ್ಲಿ ಬೆಳದು, ವಿಶ್ವದ ಬ್ಯಾಡ್ಮಿಂಟನ್ ಅಂಗಳದಲ್ಲಿ ಸೂಪರ್ ಸೈನಾ ಆಗಿ ಮೆರೆದ ಅವರ ಕ್ರೀಡಾ ಬದುಕು ಛಲ, ಪರಿಶ್ರಮ ಮತ್ತು ತ್ಯಾಗದ ಪ್ರತೀಕ.

ಬಾಲ್ಯ, ಬ್ಯಾಡ್ಮಿಂಟನ್ ರಕ್ತಗತ

ಸೈನಾ ನೆಹ್ವಾಲ್ 1990ರ ಮಾರ್ಚ್ 17ರಂದು ಹರಿಯಾಣದ ಹಿಸ್ಸಾ ರ್ ಜಿಲ್ಲೆಯಲ್ಲಿ ಹರ್ವೀರ್ ಸಿಂಗ್ ಮತ್ತು ಉಷಾ ರಾಣಿ ದಂಪತಿಗಳ ಮಗಳಾಗಿ ಸೈನಾ ಜನಿಸಿದರು. ಸೈನಾ ಅವರ ರಕ್ತದಲ್ಲೇ ಬ್ಯಾಡ್ಮಿಂಟನ್ ಇತ್ತು ಎಂದರೆ ತಪ್ಪಾಗಲಾರದು. ತಂದೆ ಹರ್ವೀರ್ ಸಿಂಗ್ ಮತ್ತು ತಾಯಿ ಉಷಾ ರಾಣಿ ಇಬ್ಬರು ಹರಿಯಾಣದ ಮಾಜಿ ಬ್ಯಾಡ್ಮಿಂಟನ್ ಚಾಂಪಿಯನ್‌ಗಳಾಗಿದ್ದರು. ತಂದೆಯ ಕೆಲಸದ ನಿಮಿತ್ತ ಕುಟುಂಬ ಹೈದರಾಬಾದ್‌ಗೆ ಸ್ಥಳಾಂತರಗೊಂಡಾಗ ಸೈನಾಗೆ ಕೇವಲ ಎಂಟು ವರ್ಷ. ಭಾಷೆ ಬಾರದ ಊರಿನಲ್ಲಿ ಒಂಟಿತನ ಕಳೆಯಲು ಬ್ಯಾಂಡ್ಮಿಂಟನ್ ರಾಕೆಟ್ ಹಿಡಿದ ಪುಟ್ಟ ಬಾಲಕಿ, ಮುಂದೆ ಅದೇ ರಾಕೆಟ್ ಮೂಲಕ ಜಗತ್ತನ್ನೇ ಗೆಲ್ಲುತ್ತಾಳೆ ಎಂದು ಅಂದು ಯಾರೂ ಊಹಿಸಿರಲಿಲ್ಲ.

ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಎದ್ದು, ತಂದೆಯ ಸ್ಕೂಟರ್ ಮೇಲೆ 25 ಕಿ.ಮೀ ದೂರದ ಸ್ಟೇಡಿಯಂಗೆ ಹೋಗಿ ಅಭ್ಯಾಸ ನಡೆಸುತ್ತಿದ್ದ ಆ ದಿನಗಳೇ ಸೈನಾ ಅವರ ಭವಿಷ್ಯದ ಬುನಾದಿಯಾಗಿದ್ದವು. 1998ರಲ್ಲಿ ತರಬೇತುದಾರ ನಾನಿ ಪ್ರಸಾದ್ ರಾವ್ ಅವರ ಬಳಿ ಅಭ್ಯಾಸ ಆರಂಭಿಸಿದ ಸೈನಾ, ನಂತರ ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಎಸ್.ಎಂ. ಆರಿಫ್ ಅವರ ಗರಡಿಯಲ್ಲಿ ಪಳಗಿದರು. ಆದರೆ ಪುಲ್ಲೇಲ ಗೋಪಿಚಂದ್ ಅವರ ಅಕಾಡೆಮಿಗೆ ಸೇರಿದ ನಂತರ ಸೈನಾ ವೃತ್ತಿಜೀವನಕ್ಕೆ ಮಹತ್ತರ ತಿರುವು ಸಿಕ್ಕಿತು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಚಲನ

2006 ಸೈನಾ ಅವರ ವೃತ್ತಿಜೀವನದ ಆರಂಭಿಕ ಮೈಲಿಗಲ್ಲು. ಅಂದು ಅವರು ಫಿಲಿಪೈನ್ಸ್ ಓಪನ್ ಟೂರ್ನಮೆಂಟ್ ಗೆಲ್ಲುವ ಮೂಲಕ ಫೋರ್-ಸ್ಟಾರ್ ಬ್ಯಾಡ್ಮಿಂಟನ್ ಟೂರ್ನಿ ಗೆದ್ದ ಮೊದಲ ಭಾರತೀಯ ಮಹಿಳೆ ಮತ್ತು ಏಷ್ಯಾದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗ ಅವರಿಗೆ ಕೇವಲ 16 ವರ್ಷ. ಅದೇ ವರ್ಷ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್-ಅಪ್ ಆಗುವ ಮೂಲಕ ತಮ್ಮ ಭವಿಷ್ಯದ ಸೂಚನೆ ನೀಡಿದರು. 2008ರಲ್ಲಿ ಪುಣೆಯಲ್ಲಿ ನಡೆದ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಗೆದ್ದು, ಈ ಸಾಧನೆ ಮಾಡಿದ ಮೊದಲ ಭಾರತೀಯ ಎಂಬ ಇತಿಹಾಸ ನಿರ್ಮಿಸಿದರು.

ಬೀಜಿಂಗ್ ಒಲಿಂಪಿಕ್ಸ್ (2008) ಸೈನಾ ಪಾಲಿಗೆ ಒಂದು ಪ್ರಮುಖ ವೇದಿಕೆಯಾಯಿತು. ಕ್ವಾರ್ಟರ್ ಫೈನಲ್ ತಲುಪಿದರೂ ಪದಕ ಗೆಲ್ಲಲು ವಿಫಲರಾದರು. ಆದರೆ, ವಿಶ್ವದ ಶ್ರೇಷ್ಠ ಆಟಗಾರರಿಗೆ ಸವಾಲೊಡ್ಡುವ ಭಾರತೀಯ ಆಟಗಾರ್ತಿಯೊಬ್ಬಳ ಉದಯವಾಗಿತ್ತು.

ಲಂಡನ್ ಒಲಿಂಪಿಕ್ಸ್ ಮತ್ತು ಐತಿಹಾಸಿಕ ಕಂಚು

2012ರ ಲಂಡನ್ ಒಲಿಂಪಿಕ್ಸ್ ಭಾರತೀಯ ಬ್ಯಾಡ್ಮಿಂಟನ್ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಬರೆಯಿತು. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ, ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ಎಂಬ ಕೀರ್ತಿಗೆ ಸೈನಾ ಭಾಜನರಾದರು. ಅಂದು ಅವರು ಚೀನಾದ ಪ್ರಬಲ ಆಟಗಾರ್ತಿ ವಾಂಗ್ ಕ್ಸಿ ನ್ ಅವರನ್ನು ಎದುರಿಸಿದ್ದರು. ಪಂದ್ಯದ ವೇಳೆ ಎದುರಾಳಿ ಗಾಯಗೊಂಡು ನಿವೃತ್ತರಾದಾಗ, ಸೈನಾ ಅವರಿಗೆ ಕಂಚಿನ ಪದಕ ಲಭಿಸಿತ್ತು. ಇದು ಕೇವಲ ಅದೃಷ್ಟವಲ್ಲ, ಅಲ್ಲಿಯವರೆಗೆ ಅವರು ತೋರಿದ ಸ್ಥಿರ ಪ್ರದರ್ಶನದ ಫಲವಾಗಿತ್ತು.

ವಿಶ್ವದ ನಂಬರ್ 1 ಪಟ್ಟಕ್ಕೆ ಏರಿಕೆ

ಸೈನಾ ಅವರ ವೃತ್ತಿಜೀವನದ ಮತ್ತೊಂದು ಶಿಖರವೆಂದರೆ 2015ರಲ್ಲಿ ಅವರು ವಿಶ್ವದ ನಂಬರ್ 1 ಶ್ರೇಯಾಂಕ ಏರಿದ್ದರು. ಇಂಡಿಯನ್ ಓಪನ್ ಸೂಪರ್ ಸೀರೀಸ್‌ನಲ್ಲಿ ಕೆರೊಲಿನಾ ಮರಿನ್ ಅವರನ್ನು ಸೆಮಿಫೈನಲ್‌ನಲ್ಲಿ ಮಣಿಸುವ ಮೂಲಕ, ಪ್ರಕಾಶ್ ಪಡುಕೋಣೆ ಅವರ ನಂತರ ಈ ಸಾಧನೆ ಮಾಡಿದ ಏಕೈಕ ಭಾರತೀಯ ಮತ್ತು ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಚೀನಾದ ಮಹಾಗೋಡೆಯನ್ನು ಭೇದಿಸಿ, ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಭಾರತದ ಪತಾಕೆ ಹಾರಿಸಿದ ಆ ಕ್ಷಣ ಕೋಟ್ಯಂತರ ಭಾರತೀಯರಿಗೆ ರೋಮಾಂಚನ ನೀಡಿತ್ತು.

ಸೂಪರ್ ಸೀರೀಸ್‌ಗಳ ಸರಮಾಲೆ

ಸೈನಾ ಕೇವಲ ಒಲಿಂಪಿಕ್ಸ್ ಅಥವಾ ಶ್ರೇಯಾಂಕಗಳಿಗೆ ಸೀಮಿತವಾಗಲಿಲ್ಲ. ಅವರು ಸೂಪರ್ ಸೀರೀಸ್ ಪ್ರಶಸ್ತಿಗಳನ್ನು ಬೇಟೆಯಾಡಿದರು. 2009ರಲ್ಲಿ ಇಂಡೋನೇಷ್ಯಾ ಓಪನ್ ಗೆಲ್ಲುವ ಮೂಲಕ ಸೂಪರ್ ಸೀರೀಸ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಎಂಬ ಖ್ಯಾತಿ ಗಳಿಸಿದರು. 2010ರಲ್ಲಿ ಸಿಂಗಾಪುರ್ ಓಪನ್, ಇಂಡೋನೇಷ್ಯಾ ಓಪನ್ ಮತ್ತು ಹಾಂಗ್ ಕಾಂಗ್ ಓಪನ್ ಹೀಗೆ ಸಾಲುಸಾಲು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡರು. 2010ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದು ದೆಹಲಿಯ ಕ್ರೀಡಾಂಗಣದಲ್ಲಿ ಸಂಚಲನ ಮೂಡಿಸಿದರು. ಮುಂದೆ 2018ರ ಗೋಲ್ಡ್ ಕೋಸ್ಟ್ ಕಾಮನ್‌ವೆಲ್ತ್ ಗೇಮ್ಸ್ ನಲ್ಲಿಯೂ ಪಿ ವಿ ಸಿಂಧೂ ಅವರನ್ನು ಫೈನಲ್‌ನಲ್ಲಿ ಮಣಿಸಿ ಚಿನ್ನದ ಪದಲ ಗೆದ್ದರು. ಅದು ಅವರ ಛಲಕ್ಕೆ ಸಾಕ್ಷಿಯಾಗಿತ್ತು.

ಗಾಯಗಳ ಸರಮಾಲೆ, ಗೆಲುವಿನ ಹಾದಿ

ಕ್ರೀಡಾಪಟುವಿನ ಬದುಕಿನಲ್ಲಿ ಗಾಯಗಳು ಸಾಮಾನ್ಯ. ಆದರೆ ಸೈನಾ ಅವರ ವೃತ್ತಿಜೀವನದಲ್ಲಿ ಗಾಯಗಳು ದೊಡ್ಡ ಸವಾಲಾಗಿ ಪರಿಣಮಿಸಿದವು. 2016ರ ರಿಯೋ ಒಲಿಂಪಿಕ್ಸ್ ಸಮಯದಲ್ಲಿ ಮೊಣಕಾಲು ನೋವಿನಿಂದ ಬಳಲುತ್ತಿದ್ದ ಅವರು ಮೊದಲ ಸುತ್ತಿನಲ್ಲೇ ನಿರ್ಗಮಿಸಬೇಕಾಯಿತು. ಅನೇಕರು ಸೈನಾ ಯುಗ ಮುಗಿಯಿತು ಎಂದೇ ಭಾವಿಸಿದ್ದರು. ಶಸ್ತ್ರಚಿಕಿತ್ಸೆ ಗೆ ಒಳಗಾದ ನಂತರ, ಅವರು ಮತ್ತೆ ಅಂಗಳಕ್ಕಿಳಿದರು. 2017ರ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ತಾವು ಇನ್ನೂ ಕಣದಿಂದ ಸರಿದಿಲ್ಲ ಎಂಬುದನ್ನು ಸಾಬೀತುಪಡಿಸಿದರು.

ತರಬೇತುದಾರರ ಬದಲಾವಣೆ ಮತ್ತು ವಿವಾದಗಳು

ಸೈನಾ ಅವರ ವೃತ್ತಿಜೀವನದಲ್ಲಿ ತರಬೇತುದಾರರ ಪಾತ್ರ ಮಹತ್ವದ್ದು. ಗೋಪಿಚಂದ್ ಅವರ ಗರಡಿಯಲ್ಲಿ ಬೆಳೆದ ಸೈನಾ, 2014ರಲ್ಲಿ ಉತ್ತಮ ಪ್ರದರ್ಶನಕ್ಕಾಗಿ ಬೆಂಗಳೂರಿನ ಪ್ರಕಾಶ್ ಪಡುಕೋಣೆ ಅಕಾಡೆಮಿಗೆ ಸೇರಿ ವಿಮಲ್ ಕುಮಾರ್ ಅವರ ಬಳಿ ತರಬೇತಿ ಪಡೆದರು. ಈ ಅವಧಿಯಲ್ಲೇ ಅವರು ವಿಶ್ವದ ನಂ.1 ಪಟ್ಟಕ್ಕೇರಿದ್ದು ವಿಶೇಷ. ನಂತರ 2017ರಲ್ಲಿ ಮತ್ತೆ ಗೋಪಿಚಂದ್ ಅವರ ಗರಡಿಗೆ ಮರಳಿದರು. ಈ ಬದಲಾವಣೆಗಳು ಮಾಧ್ಯಮಗಳಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದವು, ಆದರೆ ಸೈನಾ ಮಾತ್ರ ತಮ್ಮ ಆಟದ ಮೇಲೆಯೇ ಹೆಚ್ಚು ಗಮನಹರಿಸಿದರು.

ವೈಯಕ್ತಿಕ ಜೀವನ ಮತ್ತು ವ್ಯಕ್ತಿತ್ವ

ಅಂಗಳದಲ್ಲಿ ಆಕ್ರಮಣಕಾರಿ ಆಟಗಾರ್ತಿಯಾಗಿರುವ ಸೈನಾ, ಹೊರಗೆ ಮೃದು ಸ್ವಭಾವದವರು. 2018ರಲ್ಲಿ ಸಹ ಆಟಗಾರ ಪರುಪಳ್ಳಿ ಕಶ್ಯಪ್ ಅವರನ್ನು ವಿವಾಹವಾದರು. ಬಾಲಿವುಡ್ ಸೇರಿದಂತೆ ಹಲವು ಜಾಹೀರಾತುಗಳಲ್ಲಿ ಕಾಣಿಸಿಕೊಂಡರೂ, ಅವರ ಮೊದಲ ಆದ್ಯತೆ ಯಾವಾಗಲೂ ಬ್ಯಾಡ್ಮಿಂಟನ್ ಆಗಿಯೇ ಉಳಿದಿದೆ. ಅವರ ಜೀವನದ ಆಧಾರದ ಮೇಲೆ ಸೈನಾ ಎಂಬ ಬಯೋಪಿಕ್ ಕೂಡ ನಿರ್ಮಾಣವಾಗಿದ್ದು, ಬಾಲಿವುಡ್ ನಟಿ ಪರಿಣೀತಿ ಚೋಪ್ರಾ ಸೈನಾ ಅವರ ಪಾತ್ರ ನಿರ್ವಹಿಸಿದ್ದಾರೆ.

ಪ್ರಶಸ್ತಿಗಳ ಗರಿ ದೇಶಕ್ಕೆ ಕೀರ್ತಿ ತಂದ ಸೈನಾ ಅವರಿಗೆ ಅರ್ಜುನ ಪ್ರಶಸ್ತಿ (2009), ರಾಜೀವ್ ಗಾಂಧಿ ಖೇಲ್ ರತ್ನ (2010), ಪದ್ಮಶ್ರೀ (2010), ಪದ್ಮಭೂಷಣ (2016) ರಾಷ್ಟ್ರ, ರಾಜ್ಯ ಸೇರಿದಂತೆ ಹತ್ತಾರು ಪ್ರಶಸ್ತಿಗಳು ಸಂದಿವೆ.

ಸೈನಾ ಎಂಬ ಶಕೆ ಇಂದು ಭಾರತದಲ್ಲಿ ಪಿ.ವಿ. ಸಿಂಧು, ಲಕ್ಷ್ಯ ಸೇನ್, ಕಿಡಂಬಿ ಶ್ರೀಕಾಂತ್ ಅವರಂತಹ ಪ್ರತಿಭೆಗಳು ವಿಶ್ವಮಟ್ಟದಲ್ಲಿ ಮಿಂಚುತ್ತಿದ್ದಾರೆ. ಆದರೆ, ಈ ಹಾದಿಯನ್ನು ಮೊದಲು ಸುಗಮಗೊಳಿಸಿದವರು ಸೈನಾ ನೆಹ್ವಾಲ್. ಬ್ಯಾಡ್ಮಿಂಟನ್ ಎಂದರೆ ಕೇವಲ ಏಷ್ಯನ್ನರ ಸೊತ್ತು ಎಂಬು ಭಾವನೆಯನ್ನು ಸುಳ್ಳಾಗಿಸಿ, ಭಾರತೀಯರೂ ಕೂಡ ವಿಶ್ವ ಚಾಂಪಿಯನ್‌ಗಳಾಗಬಲ್ಲರು ಎಂಬ ಆತ್ಮವಿಶ್ವಾಸವನ್ನು ತುಂಬಿದ ಕೀರ್ತಿ ಸೈನಾಗೆ ಸಲ್ಲಬೇಕು.

ತಮ್ಮ 33ನೇ ವಯಸ್ಸಿ ನಲ್ಲೂ ಫಿಟ್ನೆಸ್ ಮತ್ತು ಫಾರ್ಮ್‌ಗಾಗಿ ಹೋರಾಡುತ್ತಿರುವ ಸೈನಾ, ಇಂದಿನ ಯುವ ಪೀಳಿಗೆಗೆ ಒಂದು ಜೀವಂತ ಪಾಠಶಾಲೆ. ಸೋಲು-ಗೆಲುವುಗಳಾಚೆಗೆ, ಕ್ರೀಡೆಯ ಮೇಲಿನ ಅವರ ಬದ್ಧತೆ ಮತ್ತು ದೇಶಕ್ಕಾಗಿ ಪದಕ ಗೆಲ್ಲಬೇಕೆಂಬ ಹಸಿವು ಅವರನ್ನು ದಿಗ್ಗಜರ ಸಾಲಿನಲ್ಲಿ ನಿಲ್ಲಿಸುತ್ತದೆ. ಸೈನಾ ನೆಹ್ವಾಲ್ ಕೇವಲ ಒಬ್ಬ ಆಟಗಾರ್ತಿಯಲ್ಲ, ಅವರು ಭಾರತೀಯ ಮಹಿಳಾ ಕ್ರೀಡಾ ಲೋಕದ ಒಂದು ಕ್ರಾಂತಿಕಾರಿ ಅಧ್ಯಾಯ.

# ಆಸೆ ಬುರುಕತನವೇ ವಂಚಕರಿಗೆ ಅಸ್ತ್ರ: ಸೈಬರ್ ಸುರಕ್ಷತೆ ಬಗ್ಗೆ ತಿಳಿದುಕೊಳ್ಳಲೇ ಬೇಕಾದ ಅಂಶಗಳಿವು!




ಡಿಜಿಟಲ್ ವಂಚನೆ ಎಂಬ ಮಹಾಮಾರಿಯಿಂದ ತಪ್ಪಿಸಿಕೊಳ್ಳಲು ತಿಳಿದುಕೊಳ್ಳಲೇಬೇಕಾದ ಕೆಲ ಅಂಶಗಳಿವೆ. ಅವುಗಳ ಜತೆಗೆ ನಮ್ಮ ಕಾಮನ್ ಸೆನ್ಸ್ ಉಪಯೋಗಿಸಿದರೆ ಈ ವಂಚಕರಿಗೇ ತಿರುಗುಬಾಣ ಹೂಡಬಹುದು!

ಹಣ ಯಾರಿಗೆ ಬೇಡ? ಎಲ್ಲರಿಗೂ ಬೇಕು. ಯಾವುದಾದರೊಂದು ಮಾರ್ಗದಲ್ಲಿ ಹಣ ಬಂದರೆ ಸಾಕು ಎನ್ನುವ ಆಸೆಬುರುಕತನವೇ ಮೋಸಗಾರರಿಗೆ ಮತ್ತು ಡಿಜಿಟಲ್ ವಂಚಕರಿಗೆ ವರವಾಗಿದೆ. ಇದರಿಂದ ಪಾರಾಗಲು ದೊಡ್ಡ ಉಪಾಯವೇನೂ ಅಗತ್ಯವಿಲ್ಲ. ಸಾಮಾನ್ಯ ಜ್ಞಾನ ಸಾಕು. ಡಿಜಿಟಲ್ ವಂಚನೆ ಎಂಬ ಮಹಾಮಾರಿಯಿಂದ ತಪ್ಪಿಸಿಕೊಳ್ಳಲು ತಿಳಿದುಕೊಳ್ಳಲೇಬೇಕಾದ ಕೆಲ ಅಂಶಗಳಿವೆ. ಅವುಗಳ ಜತೆಗೆ ನಮ್ಮ ಕಾಮನ್ ಸೆನ್ಸ್ ಉಪಯೋಗಿಸಿದರೆ ಈ ವಂಚಕರಿಗೇ ತಿರುಗುಬಾಣ ಹೂಡಬಹುದು!

ಹೊಸ ಹೊಸ ವೇಷದಲ್ಲಿ ಈ ಡಿಜಿಟಲ್ ಮೋಸದ ಜಾಲಗಳು ಕಾರ್ಯಾಚರಣೆ ನಡೆಸುತ್ತಿವೆ. ಎಸ್‌ಬಿಐ ಎಪಿಕೆ, ಆರ್‌ಟಿಒ ಎಪಿಕೆ, ಮೀಶೋ, ಅಮೇಜಾನ್ ಬಹುಮಾನ, ಈ ರೀತಿ ಹಲವಾರು ಲಿಂಕ್‌ಗಳ ರೂಪದಲ್ಲಿ ಕಾರ್ಯಾಚಟುವಟಿಕೆ ಮಾಡುತ್ತಾ ವಂಚಿಸುತ್ತಿರುವ ಜಾಲಗಳು ಸಕ್ರಿಯವಾಗಿವೆ. ಫೇಕ್ ಫೈಲ್‌ಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೂ ಇದೆ. ಈ ಡಿಜಿಟಲ್ ಕಳ್ಳರು ಹೊಸದಾರಿಗಳನ್ನು ಹೇಗೆ ಹುಡುಕುತ್ತಾರೆ ಎಂಬುದಕ್ಕೆ ತಾಜಾ ಉದಾಹರಣೆ: ಇತ್ತೀಚೆಗೆ ವಾಟ್ಸ್ ಆಪ್ ಗ್ರೂಪ್ ಗಳಲ್ಲಿ ಮೊದಲಿಗೆ ಇದು ನಕಲಿ ಎಂದು ಭಾವಿಸಿದ್ದೆ, ಆದರೆ ನಿಜವಾಗಿಯೂ ನನಗೆ 50000 ದೊರೆಯಿತು! ನೀವೂ ಪ್ರಯತ್ನಿಸಿ ನೋಡಿ! ಎಂದು ಪ್ರಚೋದಿಸುವ ಸಂದೇಶ ಹರಿದಾಡಿತು. ಇದು ಹೊಸದಾಗಿ ವೈರಲ್ ಆಗುತ್ತಿರುವ ವಂಚನೆ ಜಾಲದ ಕೊಂಡಿ.

ಡಿಜಿಟಲ್ ಲೋಕ ತನ್ನ ವಿಸ್ತಾರವನ್ನು ಕಂಡುಕೊಂಡಷ್ಟು ವೇಗವಾಗಿ ವಂಚಕರು ವಂಚಿಸಲು ಉತ್ತಮ ವೇದಿಕೆಯಾಗಿ ಇದನ್ನು ಬಳಸಿಕೊಳ್ಳುತ್ತಿದ್ದಾರೆ. ಡಿಜಿಟಲ್ ಲೋಕ ಎಂಬುದು ಅಂಕೆ ಸಿಗದ ಮಾಯಲೋಕದಂತೆ ಬೆಳೆಯುತ್ತಿದೆ. ಹೊಸ ಹೊಸ ರೀತಿಯ ಎಐ ತಂತ್ರಜ್ಞಾನಗಳು, ಕೇವಲ ಸಾಮಾನ್ಯ ಜನರನ್ನಷ್ಟೇ ಅಲ್ಲ ಉನ್ನತ ಟೆಕ್ ಜ್ಞಾನವಿರುವ ಮೇಧಾವಿಗಳನ್ನು ಸಹ ಹುಬ್ಬೇರಿಸುವಂತೆ ಮಾಡಿವೆ. ಇದೇ ಸಮಯದಲ್ಲಿ ಡಿಜಿಟಲ್ ಲೋಕದಲ್ಲಿ ನೈಪುಣ್ಯತೆಯುಳ್ಳವರು ಇದನ್ನು ಮೋಸ ವಂಚನೆ ಮಾಡಲು ಎಗ್ಗಿಲ್ಲದೆ ಬಳಸಿಕೊಳ್ಳುತ್ತಿದ್ದಾರೆ. ತಮ್ಮ ಚಾತುರ್ಯವನ್ನು ಬಳಸಿ ಲಕ್ಷಾಂತರ, ಕೋಟ್ಯಂತರ ರೂಪಾಯಿಗಳನ್ನು ಎಲ್ಲಿಯೋ ಕುಳಿತುಕೊಂಡು ಎಗರಿಸುತ್ತಿದ್ದಾರೆ. ವ್ಯವಸ್ಥಿತ ಜಾಲದ ನೆಟ್ವರ್ಕ್‌ಗಳು ಕೋಟಿ ಕೋಟಿ ಹಣ ದೋಚುವ ಉದ್ದೇಶಿದಿಂದಲೇ ಸಕ್ರಿಯವಾಗಿವೆ. ಕೆಲವೊಮ್ಮೆ ನೆಟ್ವರ್ಕ್‌ನ ಭಾಗವಲ್ಲದೆಯೂ ಈ ಟ್ರಿಕ್‌ಗಳನ್ನು ಬಲ್ಲ ಆಸಾಮಿಗಳು ಸಹ ಜನಸಾಮಾನ್ಯರನ್ನು ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ.

ಇದ್ದಕ್ಕಿದ್ದಂತೆ ನಿಮ್ಮ ಸ್ನೇಹಿತರ ಮೊಬೈಲ್ ನಿಂದ ಎಪಿಕೆ ಫೈಲೊಂದು ನಿಮ್ಮ ವಾಟ್ಸ ಪ್ ಗುಂಪಿಗೆ ಅಥವಾ ನಿಮ್ಮ ವೈಯಕ್ತಿಕ ನಂಬರಿಗೆ ಬಂದು ಬೀಳುತ್ತದೆ. ನಿಮ್ಮ ನಂಬಿಕಸ್ಥ ಗೆಳೆಯನೇ ಆದ್ದರಿಂದ ಅದನ್ನು ನೀವು ಮತ್ತೆ ಲಿಂಕ್ ಕ್ಲಿಕ್ ಮಾಡಿ ನೋಡಲು ಯತ್ನಿಸುತ್ತೀರಿ. ನಂತರ ನಿಮಗೆ ಅರಿವಿಲ್ಲದೆ ನಿಮ್ಮ ಮೊಬೈಲ್‌ನಿಂದ ಎಪಿಕೆ ಫೈಲ್ ನಿಮ್ಮ ಸಂಪರ್ಕದಲ್ಲಿರುವ ಎಲ್ಲಾ ನಂಬರ್‌ಗಳಿಗೆ ಹಾಗೂ ವಾಟ್ಸ ಪ್ ಗುಂಪುಗಳಿಗೆ ಸುರಿಯುತ್ತದೆ. ನಿಮಗೆ ಮೇಲಿಂದ ಮೇಲೆ ಕಾಲ್‌ಗಳು ಬರಲು ಶುರುವಾಗುತ್ತವೆ. ನೀವು ಆತಂಕಕೊಳಗಾಗಿ ಭಯಬೀತರಾಗುತ್ತೀರಿ. ಇಂತಹ ಅನುಭವ ಸಾಕಷ್ಟು ಜನಕ್ಕೆ ವಿವಿಧ ರೀತಿಯಲ್ಲಿ ಆಗಿ ವಾಟ್ಸ ಪ್ ಸಹವಾಸ ಸಾಕು ಎನ್ನುವ ಅನುಭವವಾಗಿದೆ.

ಹೀಗೆ ಬರುವ ಎಪಿಕೆ ಫೈಲ್‌ಗಳು ನಮ್ಮ ವಾಟ್ಸ ಪನ್ನು ಹ್ಯಾಕ್ ಮಾಡಿ ನಮ್ಮ ಇಡೀ ಮೊಬೈಲ್ ಸಿಸ್ಟಮ್ ಅನ್ನು ಹ್ಯಾಕ್ ಮಾಡಿ ಹಣ ದೋಚುವ, ಮಾನ ಹರಾಜು ಹಾಕುವ ಪ್ರಯತ್ನ ಮಾಡುತ್ತವೆ. ಕೇವಲ ಎಪಿಕೆ ಫೈಲ್ ಕ್ಲಿಕ್ ಮಾಡುವುದಷ್ಟೇ ಅಲ್ಲ, ಬೇರೆ ಬೇರೆ ರೂಪದಲ್ಲಿ ನಮ್ಮ ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಲು ಯತ್ನಿಸುತ್ತಿರುತ್ತಾರೆ. ಗೊತ್ತಿಲ್ಲದ ನಂಬರ್ ನಿಂದ ವಿಡಿಯೋ ಕರೆ ಮಾಡಿ ನಿಮ್ಮನ್ನು ಡಿಜಿಟಲ್ ಬಂಧನ ಮಾಡಿದ್ದೇವೆ, ಇಷ್ಟು ಹಣ ಕೊಟ್ಟರೆ ಬಿಡುತ್ತೇವೆ ಎಂದು ಹಣ ಪೀಕುವುದು. ನಿಮ್ಮವರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಪೊಲೀಸ್ ಡ್ರೆಸ್‌ನಲ್ಲಿ ಕಾಣಿಸಿಕೊಂಡು ಲಕ್ಷಗಟ್ಟಲೆ ಹಣ ಪೀಕುವುದು ಇಂತಹದ್ದೆಲ್ಲ ಸರ್ವೆ ಸಾಮಾನ್ಯವಾಗಿದೆ. ಸಾಮಾಜಿಕ ಮಾಧ್ಯಮಗಳನ್ನು ಬಳಸುವಾಗ ಬಹಳ ಎಚ್ಚರಿಕೆಯಿಂದ ಬಳಸುವುದನ್ನು ರೂಢಿಸಿಕೊಳ್ಳಬೇಕಿದೆ.

ವಾಟ್ಸ ಪ್‌ನಲ್ಲಿ ಬರುವ ಈರೀತಿಯ ಯಾವುದೇ ಸಂದೇಶಗಳು ಸಂಪೂರ್ಣ ಸುಳ್ಳಾಗಿರುತ್ತವೆ ಹಾಗೂ ಮೋಸದ ಜಾಲಕ್ಕೆ ನಿಮ್ಮನ್ನು ಸೆಳೆಯಲು ಗಾಳವಾಗಿರುತ್ತವೆ. ಯಾವುದೇ ಕಂಪನಿ ಅನಗತ್ಯ ಲಿಂಕ್‌ಗಳ ಮೂಲಕ ಹಣ ನೀಡುವುದಿಲ್ಲ. ಪೊಲೀಸ್ ಇಲಾಖೆಯೂ ಸಹ ಜನಸಾಮಾನ್ಯರನ್ನು ಡಿಜಿಟಲ್ ಅರೆಸ್ಟ್ ಮಾಡಲು ಅವಕಾಶ ಇಲ್ಲ. ಯಾವುದೇ ಕಾನೂನು ಬಾಹಿರ ಚಟುವಟಿಕೆಗಳು ನಡೆದರೆ ನೇರವಾಗಿ ಪೊಲೀಸರು ಕ್ರಮ ತೆಗೆದುಕೊಳ್ಳುತಾರೆಯೇ ಹೊರತು ಈ ರೀತಿ ಮಾಡುವುದಿಲ್ಲ. ಪೊಲೀಸ್ ಇಲಾಖೆಗೂ ಸಹ ಈ ಪ್ರಕರಣಗಳನ್ನು ಭೇದಿಸುವುದು ಅಷ್ಟು ಸುಲಭವಾಗಿರಲ್ಲ. ಬಹಳ ತಜ್ಞತೆ ಇದ್ದವರು ಮಾತ್ರ ಇದನ್ನು ಕಂಡು ಹಿಡಿಯಬಲ್ಲರು. ಸೈಬರ್ ಅಪರಾಧಗಳ ಬಗ್ಗೆ ವಿಶೇಷ ಪರಿಣಿತಿ ಇರುವ ಸಿಬ್ಬಂದಿ ಇದ್ದಾಗ ಒಂದಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಬಹುದು. ಸೈಬರ್, ಡಿಜಿಟಲ್ ಅಪರಾಧಕ್ಕೆ ಎಲ್ಲೆಗಳು ಇಲ್ಲದಂತಾಗಿರುವುದು ಇದಕ್ಕೆ ಕಾರಣವಾಗಿದೆ.

ತುಮಕೂರು ಜಿಲ್ಲಾ ಪೊಲೀಸ್ ಇಲಾಖೆ ಒಂದು ವಿಶಿಷ್ಟ ಪ್ರಯತ್ನ ಮಾಡುತ್ತಿದ್ದು, ಪ್ರತಿ ಪೊಲೀಸ್ ಅಧಿಕಾರಿಗೂ ಸೈಬರ್ ತರಬೇತಿ ನೀಡುತ್ತಿದೆ. ಈಗಾಗಲೇ 1400ಕ್ಕೂ ಅಧಿಕ ಪೊಲೀಸರಿಗೆ ತರಬೇತಿ ನೀಡಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯದ ಹತ್ತಿರ ಸೈಬರ್ ತರಬೇತಿ ಕೇಂದ್ರವನ್ನು ತೆರೆದು ಹಂತ ಹಂತವಾಗಿ ತರಬೇತಿ ನೀಡಲಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾಗಿ ಜಿಲ್ಲೆಯಲ್ಲಿ ಸೈಬರ್ ಅಪರಾಧಗಳು ಸಹ ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆ ಇದೆ. ಮಕ್ಕಳ ಫೀಜು, ಮದುವೆ ಇತರೆ ಕಷ್ಟದ ಕಾಲಕ್ಕೆ ಇಟ್ಟುಕೊಂಡ ಹಣ ಅನಗತ್ಯವಾಗಿ ವಂಚಕರ ಮೋಸಕ್ಕೆ ತುತ್ತಾಗದಂತೆ ಎಚ್ಚರವಹಿಸಬೇಕಿದೆ. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಸಹ ಸೈಬರ್ ಅಪರಾಧಗಳ ಬಗ್ಗೆ ಹೆಚ್ಚು ಹೆಚ್ಚು ಜಾಗೃತಿ ಮೂಡಿಸುವ ಅನಿವಾರ್ಯತೆ ಇದೆ.

ಡಿಜಿಟಲ್ ವೇದಿಕೆಗಳಲ್ಲಿ ವಂಚನೆಗೊಳಗಾಗದಿರಲು ಅನುಸರಿಸಬೇಕಾದ ಕ್ರಮಗಳು:

ನಿಮ್ಮ ಒಟಿಪಿ ಅಥವಾ ಎಟಿಎಂ ಪಿನ್‌ಗಳನ್ನು ಬೇರೆಯವರಿಗೆ ಯಾವುದೇ ಕಾರಣಕ್ಕೂ ನೀಡಕೂಡದು

ಯಾವುದೇ ಅನಾಮಿಕ ವಿಡಿಯೋ ಕರೆಗಳನ್ನು ಸ್ವೀಕರಿಸಬೇಡಿ. ಯಾರಾದರೂ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ ಎಂದರೆ ಸ್ಥಳೀಯ ಪೊಲೀಸ್ ಠಾಣೆಗೆ ಕರೆಮಾಡಿ ತಿಳಿಸಿ

ವಾಟ್ಸ ಪ್ ಮೂಲಕ ಯಾವುದೇ ಉಚಿತ ಕೊಡುಗೆಗಳ ಲಿಂಕ್‌ಗಳು ಹಾಗೂ ಎಪಿಕೆ ಫೈಲ್‌ಗಳನ್ನು ಕ್ಲಿಕ್ ಮಾಡಬೇಡಿ.

ಅನಾಮಿಕರಿಗೆ ವೈಯಕ್ತಿಕ ಮಾಹಿತಿಯನ್ನು ನೀಡಬೇಡಿ

ನಿಮ್ಮ ಸಾಮಾಜಿಕ ಜಾಲತಾಣಗಳ ಪ್ರೊಫೈಲ್‌ಗಳಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳಬೇಡಿ.

ಕೆವೈಸಿ ಅಪ್ಡೇಟ್ ಅನ್ನು ಕೇವಲ ನಿಮ್ಮ ಬ್ಯಾಂಕ್‌ನ ಬ್ರಾಂಚ್‌ಗೆ ಹೋಗಿ ಮಾಡಿ ಅಥವಾ ಅಧಿಕೃತವಾದ ಬ್ಯಾಂಕ್ ಆಪ್ ಅಲ್ಲಿ ಮಾಡಿ ಹೊರತಾಗಿ ಯಾವುದೇ ಲಿಂಕ್‌ಗಳ ಮೂಲಕ ಮಾಡಬೇಡಿ ಯಾವುದೇ ವೆಬ್ಸೈಟ್ ಲಿಂಕನ್ನು ಕ್ಲಿಕ್ ಮಾಡುವ ಮುನ್ನ ಚೆಕ್ ಮಾಡಿ :// ಎಂದು ಇದ್ದರೆ ಉತ್ತಮ

ಯಾವುದೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಒಟಿಪಿ ಕೊಡಿ ಅಂದರೆ ಕೊಡಬೇಡಿ ಲಾಟರಿ ಅಥವಾ ಉಡುಗೊರೆ ಬಂದಿದೆ ಎಂಬ ಕರೆಗಳನ್ನು, ಲಿಂಕ್‌ಗಳನ್ನು ನಂಬಬೇಡಿ

ಡಿಜಿಟಲ್ ಮೀಡಿಯಾ ಹಾಗೂ ಫೋನ್ ಕರೆಗಳಿಂದ ಬರುವ ಆಮಿಷಗಳಿಗೆ ಒಳಗಾಗಬೇಡಿ ಅಂತವುಗಳು ಬಹುತೇಕ ನಕಲಿಯಾಗಿರುತ್ತವೆ

ಯಾವುದೇ ಸಾಮಾಜಿಕ ಜಾಲತಾಣದಲ್ಲಿ ನಿಮ್ಮ ಸ್ನೇಹಿತರ ಹೆಸರಿನಲ್ಲಿ, ಮೇಸೇಂಜರ್‌ನಲ್ಲಿ ಹಣ ಕೇಳಿದರೆ ಕಳುಹಿಸಬೇಡಿ. ಆ ಖಾತೆಗಳೂ ನಿಮ್ಮ ಆಪ್ತರ ಹೆಸರಲ್ಲಿ ಮಾಡಿರುವ ನಕಲಿ ಖಾತೆಗಳಾಗಿರುತ್ತವೆ.

ನಿಮಗೆ ವಂಚನೆಯ ಅನುಭವಗಳಾದರೆ ತಕ್ಷಣ 1930ಗೆ ಕರೆ ಮಾಡಿ, .. ಗೆ ಭೇಟಿ ನೀಡಿ ದೂರು ದಾಖಲಿಸಿ. ನಿಮ್ಮ ಪಾಸ್‌ವರ್ಡ್‌ಗಳನ್ನು ಬದಲಾಯಿಸಿ. ನಿಮ್ಮ ಬ್ಯಾಂಕ್‌ಗೆ ಕರೆ ಮಾಡಿ ತಕ್ಷಣ ಮಾಹಿತಿ ನೀಡಿ.

ಡಿಜಿಟಲ್ ಯುಗ ನಮ್ಮ ಜೀವನವನ್ನು ಸುಲಭಗೊಳಿಸಿದಷ್ಟೇ ಸಲೀಸಾಗಿ ಅಪಾಯಗಳ ಬಾಗಿಲನ್ನೂ ತೆರೆದಿದೆ. ತಂತ್ರಜ್ಞಾನವೇನೂ ನಮ್ಮ ಶತ್ರುವಲ್ಲ, ಅದನ್ನು ದುರುಪಯೋಗಪಡಿಸಿಕೊಳ್ಳುವ ಮನಸ್ಥಿತಿ ಅಪಾಯ. ಸುಲಭವಾಗಿ ಹಣ ಮಾಡುವ ಆಸೆ, ಆಮಿಷಕಾರಿ ಸಂದೇಶಗಳ ಹಿಂದೆ ಓಡುವ ಆಸೆಬುರುಕತನವೇ ಡಿಜಿಟಲ್ ವಂಚಕರಿಗೆ ದೊಡ್ಡ ಶಕ್ತಿ. ಇದನ್ನು ಸೋಲಿಸಲು ಅತ್ಯಾಧುನಿಕ ತಂತ್ರಜ್ಞಾನಕ್ಕಿಂತಲೂ ಅಗತ್ಯವಿರುವುದು ಎಚ್ಚರಿಕೆ, ತಿಳಿವಳಿಕೆ ಮತ್ತು ನಮ್ಮ ಕಾಮನ್ ಸೆನ್ಸ್ .

# ಪ್ರಣಯ್-ರಾಧಿಕಾ ರಾಯ್‌ಗೆ ಜಯ, ಐಟಿಗೆ ದಂಡ; ಏನಿದು ಪ್ರಕರಣ?

2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಭಾರತದ ಬಹುತೇಕ ಮಾಧ್ಯಮಗಳು ತಮ್ಮ ಪ್ರಜಾಪ್ರಭುತ್ವದ ಕಾವಲುನಾಯಿ ಎಂಬ ಹಿರಿಮೆಯನ್ನು ಕಳೆದುಕೊಂಡಿವೆ. ಗೋದಿ ಮೀಡಿಯಾಗಳು ಎಂಬ ಅಪಖ್ಯಾತಿಯೊಂದಿಗೆ ಮೋದಿ ಸರ್ಕಾರದ ಗೇಟ್ ಕೀಪರ್‌ಗಳು ಎಂಬ ಹಣೆಪಟ್ಟಿ ಕಟ್ಟಿಕೊಂಡಿವೆ. ಇಂತಹ ಹಣೆಪಟ್ಟಿ ಮತ್ತು ಅಪಖ್ಯಾತಿಯಿಂದ ಹೊರಗುಳಿದು, ರವೀಶ್ ಕುಮಾರ್‌ರಂತಹ ದಿಟ್ಟ ಪತ್ರಕರ್ತರ ತಂಡ ಕಟ್ಟಿಕೊಂಡು, ಪ್ರತಿಕೋದ್ಯಮದ ನೈತಿಕತೆಯನ್ನು ಉಳಿಸಿಕೊಂಡಿದ್ದ ಏಕೈಕ ಮುಖ್ಯವಾಹಿನಿ ಮಾಧ್ಯಮ . ಆದರೆ, ಈಗ ಅದೂ ಕೂಡ ಅದಾನಿಯ ಕೈಸೇರಿದೆ. ಗೋದಿ ಮೀಡಿಯಾಗಳ ಗುಂಪಿಗೆ ಪಾದಾರ್ಪಣೆ ಮಾಡಿದೆ.

ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರು ಎನ್‌ಟಿವಿಟಿಯನ್ನು ಕಟ್ಟಿ, ಸದೃಢವಾಗಿ ಬೆಳೆಸಿದ್ದರು. ಮೋದಿ ಸರ್ಕಾರದ ಜನವಿರೋಧಿ ನೀತಿ, ನಿಲುವು, ಧೋರಣೆಗಳನ್ನು ಎನ್‌ಡಿಟಿವಿ ತೀಕ್ಷ್ಣವಾಗಿ ವಿಮರ್ಶೆ ಮಾಡುತ್ತಿತ್ತು. ಜನರ ಎದುರು ಸತ್ಯವನ್ನು ತೆರೆದಿಡುತ್ತಿತ್ತು. ಅದೇ ಕಾರಣಕ್ಕಾಗಿ ಮೋದಿ ಸರ್ಕಾರದ ಕೆಂಗಣ್ಣಿಗೆ ಗುರಿಯೂ ಆಗಿತ್ತು. ಮೋದಿ ಸರ್ಕಾರವು ಎನ್‌ಡಿಟಿವಿಯನ್ನು ಹಣಿಯಲು ಶತಪ್ರಯತ್ನ ಮಾಡುತ್ತಲೇ ಇತ್ತು. ರಾಯ್ ದಂಪತಿ ವಿರುದ್ಧ ಹಣಕಾಸಿಗೆ ಸಂಬಂಧಿಸಿದಂತೆ ನಾನಾ ಆರೋಪಗಳನ್ನು ಮಾಡಿ, ಆದಾಯ ತೆರಿಗೆ ಇಲಾಖೆ, ಸಿಬಿಐಗಳನ್ನು ಛೂಬಿಟ್ಟು, ತನ್ನ ಕಾರ್ಯ ಸಾಧನೆಯಲ್ಲಿ ಯಶಸ್ವಿಯೂ ಆಯಿತು. ಎನ್‌ಡಿಟಿವಿ ರಾಯ್ ದಂಪತಿಯಿಂದ ಅದಾನಿ ಕೈಸೇರುವಂತೆ ಮಾಡಿತು.

ಆದರೆ, ನಿಧಾನವಾಗಿಯಾದರೂ ಸತ್ಯ ಜಯಿಸುತ್ತದೆ ಎಂಬಂತೆ ರಾಯ್ ದಂಪತಿ ತಮ್ಮ ವಿರುದ್ಧದ ಆರೋಪಗಳಿಂದ ಮುಕ್ತರಾಗಿದ್ದಾರೆ. ರಾಯ್ ದಂಪತಿ ವಿರುದ್ಧ ಆದಾಯ ತೆರಿಗೆ (ಐಟಿ) ಇಲಾಖೆ ದಾಖಲಿಸಿದ್ದ ಪ್ರಕರಣ ಮತ್ತು ನೋಟಿಸ್ ಅನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದೆ. ಮಾತ್ರವಲ್ಲದೆ, ಇಲಾಖೆಯ ಕ್ರಮವು ನಿರಂಕುಶವಾದಿ, ನ್ಯಾಯವ್ಯಾಪ್ತಿಯನ್ನು ಮೀರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಾಲಯವು, ಐಟಿ ಇಲಾಖೆಗೆ 2 ಲಕ್ಷ ರೂ. ದಂಡ ವಿಧಿಸಿದೆ. ಈ ಹಣವನ್ನು ದಂಪತಿಯ ನ್ಯಾಯಾಲಯದ ವೆಚ್ಚಕ್ಕೆ ಸಾಂಕೇತಿಕ ವೆಚ್ಚವಾಗಿ ಪಾವತಿಸುವಂತೆ ಸೂಚಿಸಿದೆ.

ರಾಯ್ ದಂಪತಿ ತಮ್ಮ ಸಂಸ್ಥೆಯ ಮೂಲಕ 2009-10ರಲ್ಲಿ ಕೆಲವು ಬಡ್ಡಿರಹಿತ ಸಾಲಗಳನ್ನು ಪಡೆದಿದ್ದಾರೆ. ಆ ಮೂಲಕ ವಂಚಿಸಿದ್ದಾರೆ ಎಂದು ಆರೋಪಿಸಲಾಗಿತ್ತು. ಅಲ್ಲದೆ, ಸಾಲದ ಹಣವನ್ನು ತಮ್ಮ ಆದಾಯವೆಂದು ಉಲ್ಲೇಖಿಸಿಲ್ಲ ಎಂಬ ಕಾರಣಕ್ಕಾಗಿ ಇಬ್ಬರಿಗೂ 2011ರಲ್ಲಿ ಸಾಲ ಮತ್ತು ಆದಾಯ ಮರುವಮೌಲ್ಯಮಾಪನ ನೋಟಿಸ್‌ಅನ್ನು ನೀಡಿತ್ತು. ಆ ಮರುವಮೌಲ್ಯಮಾಪನವು 2013ರಲ್ಲಿ ಪೂರ್ಣಗೊಂಡಿತ್ತು. ಆದಾಗ್ಯೂ, 2016ರಲ್ಲಿ ಮತ್ತೊಮ್ಮೆ ನೋಟಿಸ್ ನೀಡಲಾಗಿತ್ತು.

ನೋಟಿಸ್ ವಿರುದ್ಧ ದಂಪತಿಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ಅವರ ಅರ್ಜಿಯ ವಿಚಾರಣೆ ನಡೆಸಿರುವ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ದಿನೇಶ್ ಮೆಹ್ತಾ ಮತ್ತು ವಿನೋದ್ ಕುಮಾರ್ ಅವರಿದ್ದ ಪೀಠವು, ನೋಟಿಸ್‌ಅನ್ನು ರದ್ದುಗೊಳಿಸಿದೆ. ಇಲಾಖೆಗೆ ದಂಡ ವಿಧಿಸಿದೆ.

ಏನಿದು ಪ್ರಕರಣ?

ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ಅವರ ಸಂಸ್ಥೆಯು 2008-09ರಲ್ಲಿ ಬ್ಯಾಂಕ್‌ನಿಂದ ಸುಮಾರು 375 ಕೋಟಿ ರೂಪಾಯಿ ಸಾಲ ಪಡೆದಿತ್ತು. ಆ ಸಾಲದ ಮೊತ್ತದಲ್ಲಿ, ಸಂಸ್ಥೆಯು ಪ್ರಣಯ್ ರಾಯ್‌ಗೆ ಸುಮಾರು 70 ಕೋಟಿ ರೂ. ಮತ್ತು ರಾಧಿಕಾ ರಾಯ್‌ಗೆ 60 ಕೋಟಿ ರೂ.ಗೂ ಅಧಿಕ ಹಣವನ್ನು ಬಡ್ಡಿರಹಿತ ಸಾಲವಾಗಿ ನೀಡಲಾಗಿತ್ತು. ಆ ಹಣವನ್ನು ದಂಪತಿ ಯ ಷೇರುಗಳನ್ನು ಖರೀದಿಸಲು ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಅಲ್ಲದೆ, 2009ರಲ್ಲಿ ಆರ್‌ಆರ್‌ಪಿಆರ್ ಸಂಸ್ಥೆಯು ಸಾಲದ ಸೆಟಲ್‌ಮೆಂಟ್ ಮಾಡಿಕೊಂಡಿತ್ತು. ಈ ವೇಳೆ, ಬ್ಯಾಂಕ್‌ಗೆ ಸುಮಾರು 48 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಆರೋಪಿಸಲಾಗಿದೆ.

2009-10ರ ಆರ್ಥಿಕ ವರ್ಷದಲ್ಲಿ ದಂಪತಿಗಳು ಐಟಿ ರಿಟರ್ನ್ ಸಲ್ಲಿಸಿದ್ದರು. ಅದರಲ್ಲಿ, ತಾವು ಆರ್‌ಆರ್‌ಪಿಆರ್ ಕಂಪನಿಯಿಂದ ಪಡೆದ ಸಾಲವನ್ನು ಸಾಲದ ಬಾಪ್ತಿನಲ್ಲಿ ಉಲ್ಲೇಖಿಸಿದ್ದರು. ಆದರೆ, ಆದಾಯ ಇಲಾಖೆಯು ಆರ್‌ಆರ್‌ಪಿಆರ್ ಸಂಸ್ಥೆಯಿಂದ ಪಡೆದ ಸಾಲವು ನಿಜವಾದ ಸಾಲವಲ್ಲ, ಅದು ಅವರಿಗೆ ಸಂಸ್ಥೆಯು ನೀಡಿದ ಲಾಭ ಅಥವಾ ಆದಾಯವೆಂದು ಪರಿಗಣಿಸಬೇಕು. ಯಾಕೆಂದರೆ, ಕಂಪನಿಯು ಬಡ್ಡಿರಹಿತವಾಗಿ ನೀಡಿರುವುದು ತೆರಿಗೆ ತಪ್ಪಿಸುವಿಕೆ ಅಥವಾ ಆದಾಯವನ್ನು ಮರೆಮಾಚುವ ಪ್ರಯತ್ನ ಎಂದು ವಾದಿಸಿತ್ತು.

ಬಡ್ಡಿರಹಿತ ಸಾಲವನ್ನು ಆದಾಯವನ್ನು ಭಾವಿಸಿದ್ದ ಐಟಿ ಇಲಾಖೆಯು ತನ್ನ ಮೇಲ್ನೋಟದ ಅಂದಾಜಿನ ಮೇಲೆಯೇ 2011ರಲ್ಲಿ ದಂಪತಿಗೆ ಪ್ರತ್ಯೇಕ ನೋಟಿಸ್ ನೋಡಿತು. ಅವರ ಆದಾಯವನ್ನು ಮರುಮೌಲ್ಯಮಾಪನ ಮಾಡುವಂತೆ ಸೂಚಿಸಿತು. ದಾಖಲೆಗಳ ಪರಿಶೀಲನೆಗಳು ಮುಗಿದ ಬಳಿಕ, ಸಾಲಗಳ ಸರಿಯಾದ ವಿವರಗಳು ಮತ್ತು ತೆರಿಗೆಗಳ ಮೌಲ್ಯಮಾಪನವನ್ನು ಮುಗಿಸಿತು.

ಆದಾಗ್ಯೂ, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ, ಇದೇ ವಿಚಾರವಾಗಿ 2016ರ ಮಾರ್ಚ್‌ನಲ್ಲಿ, ದಂಪತಿಗೆ ಮತ್ತೆ ಐಪಿಸಿ ಸೆಕ್ಷನ್ 148ರ ಅಡಿಯಲ್ಲಿ ಪ್ರತ್ಯೇಕ ಮರು ಮೌಲ್ಯಮಾಪನ ನೋಟಿಸ್‌ಗಳನ್ನು ಜಾರಿ ಮಾಡಿತು. ಈ ನೋಟಿಸ್‌ಗಳ ವಿರುದ್ಧ ಪ್ರಣಯ್ ಮತ್ತು ರಾಧಿಕಾ ರಾಯ್ ಅವರು ದೆಹಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದರು.

''ಬಡ್ಡಿರಹಿತ ಸಾಲ ಮತ್ತು ಆದಾಯದ ವಿಚಾರವಾಗಿ ಈಗಾಗಲೇ ಪರಿಶೀಲನೆ ನಡೆದು, ಮೌಲ್ಯಮಾಪನವನ್ನು ಮುಗಿಸಲಾಗಿದೆ. ಆದರೂ, ಮತ್ತೊಮ್ಮೆ ಅದೇ ವಿಚಾರವಾಗಿ ನೋಟಿಸ್ ನೀಡಲಾಗಿದೆ. ಮರುವಮೌಲ್ಯಮಾಪನಕ್ಕೆ ಸೂಚಿಸಲಾಗಿದೆ. ಇದು ಕಾನೂನುಬಾಹಿರ, ಅನ್ಯಾಯ ಹಾಗೂ ತೊಂದರೆ ಕೊಡುವ ಧೋರಣೆಯಾಗಿದೆ. ಅಲ್ಲದೆ, ಸಂವಿಧಾನದ ಅನುಚ್ಛೇದ 14 (ಸಮಾನತೆ), 19(1)() (ವ್ಯಾಪಾರ ಸ್ವಾತಂತ್ರ್ಯ) ಹಾಗೂ 300 (ಆಸ್ತಿ ಹಕ್ಕು)ಗಳನ್ನು ಉಲ್ಲಂಘನೆಯಾಗಿದೆ'' ಎಂದು ದಂಪತಿ ವಾದಿಸಿದ್ದರು.

ಅವರ ವಾದ ಆಲಿಸಿದ್ದ ನ್ಯಾಯಾಲಯವು 2017ರಲ್ಲಿ ನೋಟಿಸ್ ಮತ್ತು ಮರುವಮೌಲ್ಯಮಾಪನಕ್ಕೆ ತಡೆ ನೀಡಿತ್ತು. ಹೀಗಿದ್ದರೂ, ಬರೋಬ್ಬರಿ 9 ವರ್ಷಗಳ ವಿಚಾರಣೆ ಬಳಿಕ, ರಾಯ್ ದಂಪತಿಯ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಪೂರ್ಣಗೊಳಿಸಿದೆ. ''ಹಳೆಯ ವಹಿವಾಟುಗಳಿಗೆ ಸಂಬಂಧಿಸಿದಂತೆ 2ನೇ ಬಾರಿ ನೋಟಿಸ್ ನೀಡುವುದು ಅನ್ಯಾಯಯುತ ಮತ್ತು ಕಾನೂನುಬಾಹಿರವಾಗಿದೆ. ಇದು ದಂಪತಿಗೆ ತೊಂದರೆ ಮತ್ತು ಹಿಂಸೆ ಕೊಡುವ ಕ್ರಮವಾಗಿದೆ. ಹೊಸ ಅಧಿಕಾರಿ ತನ್ನದೇ ಭಿನ್ನ ಅಭಿಪ್ರಾಯ ಹೊಂದಿದ್ದಕ್ಕಾಗಿ ಈಗಾಗಲೇ ಮುಗಿದಿರುವ ಮೌಲ್ಯಮಾಪನವನ್ನು ಮತ್ತೆ ತೆರೆಯಲಾಗದು. ಇಲಾಖೆಯ ಕ್ರಮವು ಅರಾಜಕತೆಗೆ ಕಾರಣವಾಗುತ್ತದೆ'' ಎಂದು ಹೇಳಿದೆ. ಇಲಾಖೆಗೆ 2 ಲಕ್ಷ ರೂ. ದಂಡ ವಿಧಿಸಿದೆ.

ಸಿಬಿಐ ದಾಖಲಿಸಿದ್ದ ಪ್ರಕರಣ

ರಾಯ್ ದಂಪತಿ ಎದುರಿಸಿದ್ದು ಇಂದೊಂದೇ ಪ್ರಕರಣವಲ್ಲ ಸುಪ್ರೀಂ ಕೋರ್ಟ್‌ನಿಂದ ಪಂಜರದ ಗಿಳಿ ಎಂದು ಪದೇ-ಪದೇ ಛೀಮಾರಿ ಹಾಕಿಸಿಕೊಂಡಿರುವ ಸಿಬಿಐ ಕೂಡ 2017ರಲ್ಲಿ ಮತ್ತೊಂದು ಪ್ರಕರಣ ದಾಖಲಿಸಿತ್ತು. ಇದೇ ಆದಾಯ ತೆರಿಗೆ ಮತ್ತು ಮರು ಮೌಲ್ಯಮಾಪನ ವಿಚಾರಗಳನ್ನಿಟ್ಟುಕೊಂಡು ರಾಯ್ ದಂಪತಿ ವಿರುದ್ಧ ಕ್ವಾಂಟಮ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಸಂಜಯ್ ದತ್ ಅವರು ದೂರು ದಾಖಲಿಸಿದ್ದರು. ಅವರ ದೂರಿನ ಆಧಾರದಲ್ಲಿ ಆರ್ಥಿಕ ಅಕ್ರಮಗಳು, ಕ್ರಿಮಿನಲ್ ಪಿತೂರಿ, ವಂಚನೆ, ಬ್ಯಾಂಕಿಂಗ್ ನಿಮಯಗಳ ಉಲ್ಲಂಘನೆಗೆ ಸಂಬಂಧಿಸಿದ ಕಾನೂನುಗಳ ಅಡಿಯಲ್ಲಿ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು. ಎನ್‌ಡಿಟಿವಿ ಕಚೇರಿ ಮತ್ತು ರಾಯ್ ದಂಪತಿಯ ಮನೆಗಳ ಮೇಲೆ ದಾಳಿ ನಡೆಸಿತ್ತು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR